ANANTHKUMAR
PRATISHTHANA

# ಅನಂತಪಥ

ಪುಟ 8
ವ್ಯಕ್ತಿ ವಿಶೇಷ ಮಾಲಿಕೆ
ಲಲಿತಾದಿತ್ಯ ಮುಕ್ತಪೀಡ



ಸಂಪುಟ - 6 ನವೆಂಬರ್- 2025 ಸಂಚಿಕೆ - 65

## ಉತ್ಕಟ ಭಾಷಾಭಿಮಾನಿ ಅನಂತಕುಮಾರ್



ಭಾರತೀಯ ಭಾಷೆಗಳ ಸಾಲಿನಲ್ಲಿ ಕನ್ನಡಕ್ಕೆ ಅಗ್ರಗಣ್ಯ ಸ್ಥಾನವನ್ನು ಕಲ್ಪಿಸಲು ಅನಂತಕುಮಾರರು ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಿದರು. ದಾಖಲೆಯ ಆರು ಬಾರಿ ಲೋಕಸಭಾ ಸದಸ್ಯರಾಗಿ ಮತ್ತು ಒಂಭತ್ತು ಖಾತೆಗಳ ಮಂತ್ರಿಯಾಗಿ ಕನ್ನಡದಲ್ಲಿಯೇ ಪ್ರಮಾಣ ವಚನ ಸ್ವೀಕರಿಸಿದ್ದರು, ೨೦೧೨ರಲ್ಲಿ ವಿಶ್ವಸಂಸ್ಥೆಯ ಮಹಾಧಿವೇಶನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದ ಅನಂತಕುಮಾರ್ ಅಧ್ಯಕ್ಷರನ್ನೂ ಪ್ರತಿನಿಧಿಗಳನ್ನೂ ಉದ್ದೇಶಿಸಿ ಮೊದಲ ಮಾತುಗಳನ್ನೂ ಶುಭಾಶಯಗಳನ್ನೂ ಹೇಳಿದುದು ಕನ್ನಡದಲ್ಲಿಯೇ!

ಅನಂತಕುಮಾರರ ಕನ್ನಡಾಭಿಮಾನ ತೋರಿಕೆಯದಾಗಿರಲಿಲ್ಲ. ಅವರ ಖಾಸಗಿ ಸಂಗ್ರಹದಲ್ಲಿರುವ ಕನ್ನಡ ಪುಸ್ತಕಗಳನ್ನು ಗಮನಿಸಿದರೆ ಇದು ತಿಳಿಯುತ್ತದೆ. ಕನ್ನಡ ಸಾಹಿತ್ಯದಲ್ಲಿ ರಚಿತವಾಗಿರುವ ಎಲ್ಲ ವಿಷಯಗಳನ್ನು ಕುರಿತ ಪುಸ್ತಕಗಳೂ ಅವರ ಸಂಗ್ರಹದಲ್ಲಿದ್ದವು ಮಾತ್ರವಲ್ಲ, ಅವರು ಅವೆಲ್ಲವನ್ನೂ ಓದಿದ್ದರು.

ಸಾಹಿತ್ಯಕ್ಕೆ ಸಂಬಂಧಿಸಿದ ಸಭೆಗಳಲ್ಲಿ ರಾಜಕೀಯದ ಸೋಂಕೇ ಇಲ್ಲದ ಕನ್ನಡ ಸಾಹಿತ್ಯದ ಬಗ್ಗೆಯೇ ನಿರರ್ಗಳವಾಗಿ ಮಾತನಾಡುತ್ತಿದ್ದರು. 'ಹೋತಾನಂದ' ಎಂಬ ಕಾವ್ಯನಾಮದಲ್ಲಿ ಚುಟುಕಗಳನ್ನೂ ಕವನಗಳನ್ನೂ ರಚಿಸುತ್ತಿದ್ದರು ಎಂದು ಅವರ ಸ್ನೇಹಿತರು ನೆನಪಿಸಿಕೊಳ್ಳುತ್ತಿದ್ದರು.

ಅನಂತಕುಮಾರ್ ಪತ್ರಿಕಾಗೋಷ್ಠಿಗಳನ್ನು ನಡೆಸುವಾಗ, ಕಿಕ್ಕಿರಿದು ತುಂಬಿದ್ದ ಇಂಗ್ಲಿಶ್-ಹಿಂದಿ ಟಿವಿ ವರದಿಗಾರರ ನಡುವೆಯೂ, ಮೊದಲಿಗೆ ಕನ್ನಡ ಎನ್ನುತ್ತ, ಕನ್ನಡಿಗ ಪತ್ರಕರ್ತರೊಂದಿಗೆ ಮಾತನಾಡಿ ನಂತರ ಉಳಿದ ಮಾಧ್ಯಮದವರೊಡನೆ ಮಾತನಾಡುತ್ತಿದ್ದರು. ಸಂಸತ್ತಿನ ಕಾರಿಡಾರ್ ನಲ್ಲಿ 'ಕನ್ನಡ ಕಾರ್ನರ್" ಒಂದನ್ನು ಸ್ಥಾಪಿಸಿ ಅಲ್ಲಿ ಕನ್ನಡ ಪತ್ರಿಕೆಗಳೂ ಹಲವು ಕನ್ನಡ ಪುಸ್ತಕಗಳೂ ದೊರೆಯುವಂತೆ ವ್ಯವಸ್ಥೆ ಮಾಡಿದ್ದರು. ಹೀಗೆ ಅವಕಾಶ ದೊರೆತಲ್ಲೆಲ್ಲ ಕನ್ನಡವನ್ನು ಮುಂದುಮಾಡುವ ಪ್ರವೃತ್ತಿ ಅವರಿಗಿದ್ದ ಉತ್ಕಟ ಭಾಷಾಭಿಮಾನಕ್ಕೆ ಸಾಕ್ಷಿ.

**ಶಾಸ್ತ್ರೀಯ ಕನ್ನಡಕ್ಕೆ ನೆಲೆಯೆಲ್ಲಿ?**

ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ-ಮಾನ ದೊರಕುವಲ್ಲಿ ಅನಂತಕುಮಾರ್ ದುಡಿದಿರುವುದು ಬಹಳ ಜನರಿಗೆ ಗೊತ್ತಿಲ್ಲ. ಈಗ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿರುವ ಪುರುಷೋತ್ತಮ ಬಿಳಿಮಲೆಯವರು ಹಿಂದೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದಾಗ ಈ ಕುರಿತು ಆಯೋಜಿಸಿದ ರಾಷ್ಟ್ರೀಯ ವಿಚಾರ ಸಂಕಿರಣದ (೨೦೦೭) ಶಿಫಾರಸುಗಳನ್ನು ಅನಂತಕುಮಾರ್ ಸ್ವತಃ ಸರಕಾರಕ್ಕೆ ತಲುಪಿಸಿದ್ದರು. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ-ಮಾನ ಸಿಕ್ಕಿದೆಯಾದರೂ ಅದರಿಂದ ಕನ್ನಡಕ್ಕಾದ ಪ್ರಯೋಜನ ಕಡಿಮೆಯೆಂಬುದನ್ನು ಅನಂತಕುಮಾರ್ ಮನಗಂಡಿದ್ದರು. ಶಾಸ್ತ್ರೀಯ ಕನ್ನಡ ಕೇಂದ್ರವನ್ನು ಕೇಂದ್ರ ಸರಕಾರದಿಂದ ಬಿಡಿಸಿ. ರಾಜ್ಯ ಸರಕಾರದಡಿಗೆ ತರಬೇಕೆಂದು ಅವರು ಪ್ರಾಮಾಣಿಕವಾಗಿ ಬಯಸಿದ್ದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಇದ್ಯಾಗ (೨೦೧೬ರಲ್ಲಿ) ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಹನುಮಂತಯ್ಯನವರ ನೇತೃತ್ವದಲ್ಲಿ ದೆಹಲಿಗೆ ನಿಯೋಗವೊಂದು ಬಂದಿತು.

ಪುಟ 4 ರಲ್ಲಿ ಮುಂದುವರಿದಿದೆ

## ಅನಂತ ಸ್ಮೃತಿ ನಡಿಗೆ







ಅದಮ್ಯ ಚೇತನ ಮತ್ತು ಅನಂತಕುಮಾರ್ ಪ್ರತಿಷ್ಠಾನದ ಸಹಯೋಗದಲ್ಲಿ, ನಾಡಿನ ದಿಗ್ಗಜ ನಾಯಕ, ರಾಜಕೀಯ ಮುತ್ಸದ್ದಿ ಹಾಗೂ ಜನನಾಯಕರಾದ ಶ್ರೀ ಅನಂತಕುಮಾರ್ ಅವರ 7ನೇ ಪುಣ್ಯತಿಥಿಯ ಸ್ಮರಣಾರ್ಥ 'ಅನಂತ ಸ್ಮೃತಿ ನಡಿಗೆ – ಪಂಜಿನ ಮೆರವಣಿಗೆ' ಕಾರ್ಯಕ್ರಮವು ನವೆಂಬರ್ 12, 2025 ರಂದು ಯಶಸ್ವಿಯಾಗಿ ನೆರವೇರಿತು.

ಪ್ರೊ.ತೀ.ನಂ.ಶ್ರೀ. ವೃತ್ತ (ಸೌತ್ ಎಂಡ್ ಸರ್ಕಲ್) ಬಳಿ ಇರುವ ಅನಂತ ಪ್ರೇರಣಾ ಕೇಂದ್ರದಲ್ಲಿರುವ ಅನಂತಕುಮಾರ್ ಅವರ ಪ್ರತಿಮೆಗೆ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಪಿ.ವಿ. ಕೃಷ್ಣ ಭಟ್ ಮತ್ತು ಕಾರ್ಯದರ್ಶಿ ಡಾ. ತೇಜಸ್ವಿನಿ ಅನಂತಕುಮಾರ್, ಟ್ರಸ್ಟಿ ಶ್ರೀ ಪ್ರದೀಪ್ ಓಕ್, ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪುಷ್ಪಾರ್ಚನೆ ಸಲ್ಲಿಸಿದರು.

ಮಾಜಿ ಮುಖ್ಯಮಂತ್ರಿ ಶ್ರೀ ಸದಾನಂದ ಗೌಡರು ಅನಂತ ಸ್ಮೃತಿ ನಡಿಗೆ ಪಂಜಿನ ಮೆರವಣಿಗೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ಸದಾನಂದ ಗೌಡರು, "ಅನಂತಕುಮಾರ್ ಅವರು ಪರಿಶುದ್ಧಹಸ್ತದ ಪ್ರಾಮಾಣಿಕ ರಾಜಕಾರಣಿಯಾಗಿದ್ದರು. ಅವರ ಚಿಂತನೆಗಳು ಮತ್ತು ಕಾರ್ಯಗಳು ದೇಶದ ಹಿತಕ್ಕೆ ಮೀಸಲಾಗಿದ್ದವು. ಅನಂತಕುಮಾರ್ ಅವರು ಕೈಗೊಂಡ ಅಭಿವೃದ್ಧಿ ಕಾರ್ಯಗಳನ್ನು, ನಡೆ-ನುಡಿಗಳನ್ನು ಯುವ ಜನತೆ ಅರಿತು ಅನುಸರಿಸಬೇಕಾಗಿದೆ" ಎಂದು ಹೇಳಿದರು.

ಪುಟ 8 ರಲ್ಲಿ ಮುಂದುವರಿದಿದೆ

ಚಿಣ್ಣರ ಚೇತನ
ಮಕ್ಕಳಿಗಾಗಿ ರೂಪಿತವಾದ ವಿಶೇಷ ಪುಟಗಳು
ಪ್ರಕಾಶಕರು:
ಶ್ರೀಮತಿ ತೇಜಸ್ವಿನಿ ಅನಂತಕುಮಾರ್
ಅಧ್ಯಕ್ಷರು, ಅದಮ್ಯ ಚೇತನ

# ಮರಗಳ ಮೇಲೆಯೇ ಮರ ಬೆಳೆಸುವ ಜಪಾನೀ ಕೌಶಲ



ಮರಗಳನ್ನು ಅತ್ಯಂತ ಶಿಸ್ತುಬದ್ಧವಾಗಿ ಬೆಳೆಸುವಲ್ಲಿ ಜಪಾನೀಯರದು ಎತ್ತಿದ ಕೈ. ದೊಡ್ಡ ಆಲದ ಮರವನ್ನೂ ಪುಟ್ಟ ಕುಂಡದಲ್ಲಿ ಬೆಳೆಸುತ್ತಾರೆ. ಅದಕ್ಕೆ 'ಬೊನ್ಸಾಯ್' ಎನ್ನುತ್ತಾರೆ. ಅದರದೇ ಇನ್ನೊಂದು ರೂಪ 'ದೈಸುಗಿ'. ಮರದ ಮೇಲೆಯೇ ಮರಗಳನ್ನು ಬೆಳೆಸುವ ಕೌಶಲ ಅದು. ಜಪಾನಿನಲ್ಲಿ ಸಹಜವಾಗಿ ಬೆಳೆಯುವ ಸಿಡಾರ್ (ಕ್ರಿಪ್ಟೊಮೆರಿಯಾ) ವೃಕ್ಷಗಳ ಮೇಲೆ ಏರಿ ಹೋಗಿ ಇವರು ಅದರ ಕೆಲವು ಕೊಂಬೆಗಳು ಮಾತ್ರ ನೇರ ಎತ್ತರಕ್ಕೆ ಬೆಳೆಯುವಂತೆ ಮಾಡುತ್ತಾರೆ. ಪ್ರತಿ ಎರಡು ವರ್ಷಗಳಿಗೆ ಅಂಥ ಕೊಂಬೆಗಳ ಅಡ್ಡ ಗೆಲ್ಲುಗಳನ್ನು ಕಿತ್ತು ಹಾಕಿ, ಜುಟ್ಟನ್ನು ಮಾತ್ರ ಉಳಿಸುತ್ತಾರೆ. ಅವು ಇಪ್ಪತ್ತು ವರ್ಷಗಳಲ್ಲಿ ಅಡಿಕೆ ಮರಗಳ ಹಾಗೆ 10-15 ಮೀಟರ್ ಎತ್ತರಕ್ಕೆ ಬೆಳೆದ ಮೇಲೆ ಕತ್ತರಿಸಿ ಮನೆ ಕಟ್ಟಲು ಬಳಸುತ್ತಾರೆ. ಅವು ಗೆದ್ದಲು ಹತ್ತದಂಥ ಗಟ್ಟಿಮುಟ್ಟಾದ ಮರಗಳು. ಈ ವಿಧಾನದಲ್ಲಿ ಅಲ್ಲೇ ಮತ್ತೆ ಮತ್ತೆ ಹೊಸ ಕೊಂಬೆಗಳನ್ನು ಬೆಳೆಸಬಹುದು. ಒಂದೇ ವೃಕ್ಷದ ಮೇಲೆ ಅನಂತ ಮರಗಳು.

1984ರ ಡಿಸೆಂಬರ್ 2-3ರ ನಡುವಣ ರಾತ್ರಿ ಸಂಭವಿಸಿದ ಭೋಪಾಲ್ ದುರಂತದ ಬಗ್ಗೆ ನಾವೆಲ್ಲ ಕೇಳಿದ್ದೇವೆ. 'ಯೂನಿಯನ್ ಕಾರ್ಬಾಯಿಡ್' ಹೆಸರಿನ ಫ್ಯಾಕ್ಟರಿ ಸ್ಫೋಟಿಸಿದ್ದರಿಂದ ವಿಷಗಾಳಿ ಸುತ್ತೆಲ್ಲ ಹಬ್ಬಿ ಮೂರುವರೆ ಸಾವಿರ ಜನರು ಸಾವಿಗೀಡಾದರು. ನಂತರದ ದಿನಗಳಲ್ಲಿ ಅದೇ ವಿಷಗಾಳಿಯ ಪ್ರಭಾವದಿಂದ ಇನ್ನೂ ಹದಿನೈದು ಸಾವಿರ ಜನ ಪ್ರಾಣತೆತ್ತರು. ಆ ಕರಾಳ ದಿನವನ್ನು ನಾವು 'ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನ' ಎಂದು ಆಚರಿಸುತ್ತೇವೆ. ಹೆಚ್ಚು ಹೆಚ್ಚು ಗಿಡಮರಗಳನ್ನು ಬೆಳೆಸುತ್ತೇವೆಂದು ಪಣ ತೊಡುವ ದಿನ ಅದು. ಇತ್ತೀಚೆಗಷ್ಟೇ ನಿಧನರಾದ ಸಾಲು ಮರದ ತಿಮ್ಮಕ್ಕನನ್ನು ನೆನಪಿಸಿಕೊಂಡು ನಾವೂ ಕಡಿಮೆ ಜಾಗದಲ್ಲೇ ಹೆಚ್ಚು ಹೆಚ್ಚು ಮರಗಳನ್ನು ಬೆಳೆಸಬೇಕು. ಜಪಾನೀಯರ ಈ 'ದೈಸುಗಿ' ವಿಧಾನವನ್ನು ನಾವೂ ಕಲಿತರೆ ಎಷ್ಟು ಚಂದ!

# ಈ ಊರಲ್ಲಿ ಸಂಜೆ ಆರಕ್ಕೆ ಟಿವಿ ಇಲ್ಲ, ಮೊಬೈಲ್ ಇಲ್ಲ.....



ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ವಡಗಾಂವ್ ಎಂಬ ಗ್ರಾಮಕ್ಕೆ ಬನ್ನಿ. ಅಲ್ಲಿ ಪ್ರತಿ ದಿನ ಸಂಜೆ 6 ಗಂಟೆಗೆ ಸರಿಯಾಗಿ ಸೈರನ್ ಮೊಳಗುತ್ತದೆ. ಅಂದರೆ, ಊರಿಗೆಲ್ಲ ಕೇಳುವಂತೆ 'ಭೌಂವ್' ಎಂಬ ಸದ್ದು ಹೊಮ್ಮುತ್ತದೆ. ಆಗ ಊರಿನ ಎಲ್ಲ ಮನೆಯವರೂ ಟಿವಿ ಮತ್ತು ಮೊಬೈಲ್ ಗಳನ್ನು ಸ್ವಿಚಾಫ್ ಮಾಡಬೇಕು. ಮಾಡುತ್ತಾರೆ. ಏಕೆಂದರೆ ಅದು ಎಳೆಯರಿಗೆ ಹೋಮ್ ವರ್ಕ್ ಸಮಯ, ಪಾಠದ ಸಮಯ, ಭಜನೆ ಸಮಯ, ಕತೆ-ಕವನ ಓದುವ ಸಮಯ, ಮನೆಜನರ ಜೊತೆ ಒಟ್ಟಾಗಿ ಕೂತು ಮಾತಾಡುವ ಸಮಯ. ರಾತ್ರಿ ಎಂಟೂವರೆಯ ನಂತರ ಬೇಕಿದ್ದರೆ ಟಿವಿ, ಮೊಬೈಲ್ ಫೋನ್, ರೇಡಿಯೊ ಹಚ್ಚಬಹುದು.

ಮಕ್ಕಳು ಟಿವಿ, ಮೊಬೈಲ್‌ಗಳಿಗೆ ಅಂಟಿಕೊಂಡು ಜಗತ್ತನ್ನೇ ಮರೆತು ಕೂರುವುದನ್ನು ನಾವು ಎಲ್ಲ ಕಡೆ ನೋಡುತ್ತೇವೆ. ವಡಗಾಂವ್ ಗ್ರಾಮದ ಕಬ್ಬು ಬೆಳೆಗಾರ ದಿಲೀಪ್ ಮೋಹಿತೆ ತನ್ನ ಮೂವರು ಮಕ್ಕಳೂ ಹೀಗೆ ಪರದೆಯ ಮೋಹಕ್ಕೆ ಸಿಲುಕುತ್ತಿರುವುದನ್ನು ದಿನವೂ ನೋಡುತ್ತಿದ್ದರು. ಇದನ್ನು ತಪ್ಪಿಸಲು ಅವರು ಪ್ರತಿ ಮನೆಗೆ ಹೋಗಿ ಕೇಳಿದಾಗ ಎಲ್ಲರೂ 'ಸೈರನ್ ವ್ಯವಸ್ಥೆಗೆ' ಸೈ ಎಂದರು. ಯಾರ ಒತ್ತಾಯವೂ ಇಲ್ಲದೇ ಆ ಊರಿನ ಎಲ್ಲರೂ ಈ ನಿಯಮವನ್ನು ಪಾಲಿಸುತ್ತಾರೆ. ಇದರಿಂದ ಪಾಠ ಕಲಿತ ಪಕ್ಕದ ಯವತ್ಮಾಲ್ ಜಿಲ್ಲೆಯ ಬನ್‌ಶೀ ಎಂಬ ಊರಲ್ಲೂ ಇದೇ ವ್ಯವಸ್ಥೆ ಜಾರಿಗೆ ಬಂದಿದೆ. ಈ ಹಳ್ಳಿಗಳಲ್ಲಿ ಶಾಲಾ ಮಕ್ಕಳ ಪರೀಕ್ಷೆಯ ಫಲಿತಾಂಶ ಕೂಡ ಈಗ ಹೆಚ್ಚಾಗಿದೆ.

ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

# ರಷ್ಯಾಗೊಂದು ಎಚ್ಚರಿಕೆ

೧೯೭೭, ಹುಬ್ಬಳ್ಳಿಯಲ್ಲಿ ವಿದ್ಯಾರ್ಥಿ ಪರಿಷತ್ತನ್ನು ಬಲಪಡಿಸುವ ಪ್ರಯತ್ನ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಪಿ.ವಿ. ಕೃಷ್ಣಭಟ್ಟರ ಮಾರ್ಗದರ್ಶನದಲ್ಲಿ ಮೊದಲಾಯಿತು. ಅಚ್ಯುತ ಲಿಮಯೆ ಪ್ರಾಂತ ಕಾರ್ಯಕಾರಿಣಿ ಸದಸ್ಯರಾಗಿ ನೇಮಕಗೊಂಡಿದ್ದು ಹುಬ್ಬಳ್ಳಿ ಭಾಗದಲ್ಲಿ ಸಂಘಟನೆಯನ್ನು ಬಲಪಡಿಸುವ ಹೊಣೆ ಹೊತ್ತಿದ್ದರು. ಅವರ ಸಮಕಾಲೀನ ವಿದ್ಯಾರ್ಥಿಮಿತ್ರರ ಬಳಗಕ್ಕೆ ಸೇರಿದ ಅನಂತಕುಮಾರ, ಗುಡ್ಡು ಇನಾಂದಾರ್, ಅನಿಲ್ ಸಹಸ್ರಬುದ್ದೆ, ವಾದೀಂದ್ರ ಆಚಾರ್ಯ ಮೊದಲಾದವರು ಪರಿಷತ್ತು ಪುನಶ್ಚತನಗೊಳ್ಳಲು ಹೆಗಲುಕೊಟ್ಟರು


ಕಾಲೇಜು ವರ್ಗಾವಣೆಯ ಸೌಲಭ್ಯವನ್ನು ಬಳಸಿಕೊಂಡು ಬಾಗಲಕೋಟೆಯಿಂದ ಹುಬ್ಬಳ್ಳಿಗೆ ಬಂದ ವಿಷ್ಣುಕಾಂತ ಚಟಪಲ್ಲಿ ಗೆಳೆಯರ ಗುಂಪಿಗೆ ಮತ್ತಷ್ಟು ಹುರುಪು ತಂದರು. ಅಚ್ಯುತ, ಅನಂತ, ಗುಡ್ಡು, ಅನಿಲ್ ಮತ್ತು ವಿಷ್ಣುಕಾಂತರನ್ನು ಹುಬ್ಬಳ್ಳಿಯ ಪಂಚಪಾಂಡವರೆಂದು ಗುರುತಿಸುವಷ್ಟರಮಟ್ಟಿಗೆ ಪರಿಷತ್ತು ಬೆಳೆವಣಿಗೆ ಕಂಡಿತು.



ಇಂದಿರಾ ಗ್ಲಾಸ್ ಹೌಸಿನಲ್ಲಿ ಸಾಮಾನ್ಯವಾಗಿ ಪರಿಷತ್ತಿನ ಬೈಠಕ್ ನಡೆಯುತ್ತಿದ್ದಿತು. ಅಲ್ಲಿಯವರೆವಿಗೂ ಪರಿಷತ್ತಿನಲ್ಲಿದ್ದುದು ಹುಡುಗರ ಪಾಳೆಯವೇ. ವಿದ್ಯಾ ಮುನವಳ್ಳಿ ಎಂಬ ಯುವತಿ ಪರಿಷತ್ತಿನ ಸದಸ್ಯಳಾಗಲು ಮುಂದೆ ಬಂದಮೇಲೆ ಸಂಘಟನೆಯ ಕಾರ್ಯಕ್ರಮದ ರೂಪರೇಷೆ ಬದಲಾವಣೆ ಕಂಡಿತು. ಸಾರ್ವಜನಿಕ ಸ್ಥಳದಿಂದ ಪರಿಷತ್ತಿನ ಕೇಂದ್ರಸ್ಥಾನ ಅಚ್ಯುತ ಲಿಮಯೆಯ ಮನೆಗೆ ಸ್ಥಳಾಂತರಗೊಂಡಿತು. ಮುಂದೆ ಗೀತಾ ಬ್ಯಾಹಟ್ಟಿ (ಅನಘಾ ಲಿಮಯೆ) ಮೊದಲಾದ ವಿದ್ಯಾರ್ಥಿನಿಯರು ಪರಿಷತ್ತಿಗೆ ಸೇರ್ಪಡೆಗೊಳ್ಳುತ್ತಿದ್ದಂತೆಯೇ ಪರಿಷತ್ತಿಗೆ ಸೇರಬಯಸುವ ಯುವತಿಯರ ಸಂಖ್ಯೆಯೂ ಹೆಚ್ಚತೊಡಗಿತು.

ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಅವರು ಕೆಲಸ ಮಾಡಲು ಬೇಕಾದ ಸೂಕ್ತ ವಾತಾವರಣ ನಿರ್ಮಾಣ ಮಾಡಿದ್ದರಲ್ಲಿ ಅನಂತಕುಮಾರ್ ಪಾತ್ರ ದೊಡ್ಡದು. ಈ ಪ್ರಕ್ರಿಯೆಯಲ್ಲಿ ಖಂಡಿತವಾಗಿ ಶ್ರೀಮತಿ ಗಿರಿಜಾ ಶಾಸ್ತ್ರಿ ಅವರು ಕೊಟ್ಟ ಸಂಸ್ಕಾರ ಎಂಬುದು ಸ್ಪಷ್ಟ ಗೋಚರವಾಗುತ್ತದೆ.

ಮಾರನೆಯ ವರ್ಷವೇ ಅನಂತಕುಮಾರರನ್ನು ಧಾರವಾಡ ವಿಭಾಗದ ಪ್ರಮುಖರೆಂದು ನೇಮಿಸಲಾಯಿತು. ಈ ವಿಭಾಗದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳ ವರದಿ ಸಲ್ಲಿಸುವುದು ಪ್ರಮುಖರಾದವರ ಜವಾಬ್ದಾರಿ. ಹುಬ್ಬಳ್ಳಿಯ ಕಾರ್ಯಕ್ರಮಗಳೇನೋ ಯಶಸ್ವಿಯಾಗಿ ನಡೆಯುತ್ತಿದ್ದವು. ಆ ಯಶಸ್ಸನ್ನು ಸ್ವಲ್ಪ ಉತ್ತೇಕ್ಷಿಸಿ ಹೇಳುವುದು ಅನಂತಕುಮಾರರ ಸ್ವಭಾವವಾಗಿತ್ತು. “ನೋಡು ನಾವು ನಡೆಸೋ ಸಮಾರಂಭ ಅಂದ್ರೆ ಅದೇನು ಸಣ್ಣದಾ? ಹುಬ್ಬಳ್ಳಿಯ ಕಾರ್ಯಕ್ರಮ ಅಂದ್ರೆ ಅಷ್ಟು ಸಾಧಾರಣ ಅಲ್ಲ ಅನ್ನೂದು ಇಡೀ ರಾಜ್ಯಕ್ಕೆ ಗೊತ್ತಾಗಬೇಕಲ್ಲ,” ಇದರಿಂದಾಗಿ ಹುಬ್ಬಳ್ಳಿಯ ಶಾಖೆಯ ಪ್ರಾಮುಖ್ಯತೆ ಬೆಳೆಯಿತು, ರಾಜ್ಯದ ಹಿರಿಯರು ಗಮನಿಸುವಂತಾಯಿತು.




1978ರ ಕಾಲದಲ್ಲೇ ರಷ್ಯಾದೇಶವು ಆಫ್ಘಾನಿಸ್ತಾನವನ್ನು ಆಕ್ರಮಿಸಿದ ಘಟನೆ ದೊಡ್ಡ ಸುದ್ದಿಯಾಯಿತು. ಆಗ ಅನಂತಕುಮಾರ ಮತ್ತು ಅಚ್ಯುತ ಲಿಮಯೆ ಸೇರಿ ಒಂದು ಪತ್ರಿಕಾ ಹೇಳಿಕೆಯನ್ನು ಸಿದ್ಧಪಡಿಸಿದರು. ರಷ್ಯಾದ ದುರಾಕ್ರಮಣವನ್ನು ಖಂಡಿಸಿ ವಿದ್ಯಾರ್ಥಿ ಪರಿಷತ್ತಿನ ಪರವಾಗಿ ಕೊಟ್ಟ ಹೇಳಿಕೆ. ರಷ್ಯಾ ಈ ಕೂಡಲೇ ಆಫ್ಘಾನಿಸ್ತಾನವನ್ನು ಬಿಟ್ಟು ಹೊರಡತಕ್ಕದ್ದೆಂದೂ ಇಲ್ಲವಾದರೆ ತೀವ್ರ ಪ್ರತಿಭಟನೆ, ಹೋರಾಟ ನಡೆಸಲಾಗುವುದೆಂದೂ ಹೇಳಿಕೆಯಲ್ಲಿ ಬರೆಯಲಾಗಿತ್ತು. ಒಕ್ಕಣೆ ಬರೆದವರಿಗೂ ಈ ಹೋರಾಟ ಮಾಡುವವರು ಯಾರು ಎಲ್ಲಿ ಹೇಗೆ ಗೊತ್ತಿರಲಿಕ್ಕಿಲ್ಲ. ಈ ಹೇಳಿಕೆಯನ್ನು ಪಡೆದುಕೊಂಡ ಪತ್ರಕರ್ತರು ಅಚ್ಚುಕಟ್ಟಾಗಿ ಟೆಲಿಪ್ರಿಂಟರ್ ಮೂಲಕ ನಾಡಿನ ಎಲ್ಲ ಪತ್ರಿಕೆಗಳಿಗೆ ತಲುಪಿಸಿದರು. ಮಾರನೆಯ ದಿನ ಎಲ್ಲ ಪತ್ರಿಕೆಗಳಲ್ಲೂ ರಷ್ಯಾ ವಿರುದ್ಧ ಪರಿಷತ್ತಿನ ಪ್ರತಿಭಟನೆ, ತೀವ್ರ ಹೋರಾಟದ ಎಚ್ಚರಿಕೆ ಎಂಬ ಶೀರ್ಷಿಕೆಯಲ್ಲಿ ಹುಬ್ಬಳ್ಳಿಯ ಹೇಳಿಕೆ ಪ್ರಕಟವಾಗಿಯೇ ಬಿಟ್ಟಿತು.

ಮುಂದೆ ಒಂದು ಬೈಠಕ್‌ನಲ್ಲಿ ಭೇಟಿಯಾದ ಮಂಗಳೂರಿನ ಪ್ರೊ. ಸಿ.ಎನ್. ಶಂಕರರಾಯರು ಅಚ್ಯುತ ಲಿಮಯೆ-ಅನಂತಕುಮಾರರನ್ನು ಮಾತನಾಡಿಸಿ, “ನೀವು ಕಾಬೂಲಿಗೆ ಹೋಗುವುದು ಯಾವಾಗ? “ ಎಂದು ಕೇಳಿದರು. ಅಲ್ಲಪಾ, ರಷ್ಯಾ ವಿರುದ್ಧ ಉಗ್ರ ಹೋರಾಟಕ್ಕೆ ನೀವು ಹುಬ್ಬಳ್ಳಿ ಹುಡುಗರು ಎಚ್ಚರಿಕೆ ಬೇರೆ ಕೊಟ್ಟಿದ್ದೀರಿ, ಯಾವಾಗ ಹೋಗ್ತಿರಿ ಅಂತ ಕೇಳಿದೆ, ಅಷ್ಟೇ” ಎಂದು ನಕ್ಕರು! ತಕ್ಷಣ ಇಬ್ಬರಿಗೂ ತಮ್ಮ ತಪ್ಪಿನ ಅರಿವಾಯಿತು. ರಾಷ್ಟ್ರ ಮಟ್ಟದ ಸಂಘಟನೆಯ ಭಾಗವಾಗಿ ಯಾವ ರೀತಿಯ ಹೇಳಿಕೆ ಕೊಡಬೇಕು ಅನ್ನುವದನ್ನು ಚಿಕ್ಕ ವಯಸ್ಸಿನಲ್ಲಿ ಕಲಿತ ಅನಂತ ಕುಮಾರ ಕೊನೆಯ ವರೆಗೆ ಈ ಕಲಿಕೆಯನ್ನು ಅಳವಡಿಸಿಕೊಂಡರು.



ಅನಂತಕುಮಾರ ಪರಿಷತ್ತಿನ ವಿಭಾಗ ಪ್ರಮುಖರಾಗಿ ನೇಮಕಗೊಂಡ ಮೇಲೆ ಬೆಳಗಾವಿ, ಬಿಜಾಪುರ, ಶಿರಸಿ ಮುಂತಾದ ಅನೇಕ ಪ್ರದೇಶಗಳಲ್ಲಿ ವ್ಯಾಪಕವಾಗಿ ಪ್ರವಾಸಮಾಡಿ ಸಂಘಟನೆಯನ್ನು ಕಾರ್ಯವನ್ನು ಚುರುಕು ಗೊಳಿಸಿದರು. ಕಾರ್ಯಕ್ರಮಗಳ ವ್ಯವಸ್ಥೆಮಾಡುವುದು, ಸಂಘಟನೆ, ಬೈಠಕ್ ನಿರ್ವಹಣೆ ಮತ್ತಿತರ ಜವಾಬ್ದಾರಿಯ ಜೊತೆ ವೇದಿಕೆ ಹತ್ತಿ ಭಾಷಣ ಮಾಡುವ ಹೊಣೆ ಅನಂತಕುಮಾರರಿಗೆ! ಇವರ ಸಂಯೋಜನೆಯಲ್ಲಿ 1978-80ರ ಅವಧಿಯಲ್ಲಿ ಪರಿಷತ್ತಿನ ಸಂಘಟನೆಯ ಕೆಲಸ ಅತ್ಯಂತ ಯಶಸ್ವಿಯಾಯಿತು.. ವಿವಿಧೆಡೆಗಳಲ್ಲಿ ಶಾಖೆಗಳನ್ನು ಪ್ರಾರಂಭಿಸುವ ಕೆಲಸ ಸಾಗಿತು. ಸದಸ್ಯತಾ ಅಭಿಯಾನದಲ್ಲಿ ಅಚ್ಚರಿ ಮೂಡಿಸುವಷ್ಟು ಸಂಖ್ಯೆಯಲ್ಲಿ ಗಣನೀಯ ಸುಧಾರಣೆ ಕಾಣಿಸಿತು.

(ಪುಟ 1 ರಿಂದ)

## ಉತ್ಕಟ ಭಾಷಾಭಿಮಾನಿ ಅನಂತಕುಮಾರ್

ಅದರಲ್ಲಿ ಚಿದಾನಂದ ಮೂರ್ತಿಯವರಂಥ ಹಿರಿಯರೂ ಇದ್ದರು. ಈ ನಿಯೋಗವು ಸಭೆ ಸೇರಿದ್ದು ಅನಂತಕುಮಾರ್ ಅವರ ಮನೆಯಲ್ಲಿ ನಿಯೋಗದ ಎಲ್ಲರನ್ನೂ ಅಭಿನಂದಿಸಲು ಅನಂತಕುಮಾರ್ ಅವರು ಕರ್ನಾಟಕದ ೧೨ ಜನ ಎಂಪಿಗಳನ್ನು ಕ್ಷಿಪ್ರವಾಗಿ ಸೇರಿಸಿದರು. ನಿಯೋಗದ ಉದ್ದೇಶವನ್ನು ಅವರಿಗೆ ವಿವರಿಸಿ, ಶಾಸ್ತ್ರೀಯ ಕೇಂದ್ರವು ರಾಜ್ಯ ಸರಕಾರದ ಕೈಕೆಳಗೆ ಬರಲು ಎಲ್ಲರೂ ಒಟ್ಟಾಗಿಯೇ ಕೆಲಸ ಮಾಡಬೇಕೆಂದು ವಿನಂತಿಸಿಕೊಂಡರು.

ಸಾಯಂಕಾಲ ಆರು ಗಂಟೆಯ ಹೊತ್ತಿಗೆ ಆಗ ಮಾನವ ಸಂಪನ್ಮೂಲ ಇಲಾಖೆಯ ಸಚಿವೆಯಾಗಿದ್ದ ಸ್ಮೃತಿ ಇರಾನಿಯವರ ಕೊಠಡಿಗೆ ನಿಯೋಗದ ಸದಸ್ಯರನ್ನು ಕರೆದೊಯ್ದು ಸಚಿವರಿಗೆ ಎಲ್ಲರನ್ನೂ ಪರಿಚಯಿಸಿ, ಬಂದ ಉದ್ದೇಶವನ್ನು ವಿವರಿಸಿದರು. ಶ್ರೀಮತಿ ಇರಾನಿಯವರು 'ಅನಂತ ಜೀ ಹೇಳಿದ ಮೇಲೆ ಆಗೋದಿಲ್ಲ ಎನ್ನಲಾದೀತೇ? ನೀವು ಆ ಶಾಸ್ತ್ರೀಯ ಕೇಂದ್ರ ನಡೆಸಲು ಬೇಕಾದಷ್ಟು ಸ್ಥಳ ಕೊಡಿ, ಪತ್ರ ಬರೆಯಿರಿ, ಒಂದು ತಿಂಗಳ ಒಳಗಾಗಿ ಅದನ್ನು ರಾಜ್ಯ ಸರಕಾರಕ್ಕೆ ಒಪ್ಪಿಸುತ್ತೇನೆ' ಅಂದರು.

ಆದರೆ ಕರ್ನಾಟಕ ರಾಜ್ಯ ಸರಕಾರಕ್ಕೆ ಅಂಥದ್ದೊಂದು ಪತ್ರ ಬರೆಯಲಾಗಲೇ ಇಲ್ಲ, ಯಾಕೆಂದರೆ ಆ ಹೊತ್ತಿಗೆ ಕೇಂದ್ರವು ಬೆಂಗಳೂರಲ್ಲೋ ಮೈಸೂರಲ್ಲೋ ಎಂಬ ಜಗಳ ಪ್ರಾರಂಭವಾಗಿತ್ತು. ಈ ನಡುವೆ ಬಿಳಿಮಲೆಯವರನ್ನು ಒಮ್ಮೆ ಭೇಟಿಯಾಗಿದ್ದ ಅನಂತಕುಮಾರ್, 'ನೋಡಿ, ನಾನಿಲ್ಲಿ ನಿಮ್ಮ ಕಣ್ಣೆದುರೇ ಎಲ್ಲ ಕೆಲಸ ಮಾಡಿದ್ದೆ. ಅಲ್ಲಿನವರಿಗೆ ಜಾಗ ತೋರಿಸಿ ಒಂದು ಪತ್ರ ಬರೆಯಲಾಗಲಿಲ್ಲ. ಈಗ ನಾನೇನಾದರೂ ಹೇಳಿದರೆ ತಕ್ಷಣ ಅದಕ್ಕೆ ರಾಜಕೀಯ ಬಣ್ಣ ಬಂದುಬಿಡುತ್ತದೆ' ಎಂದು ಬೇಸರಿಸಿಕೊಂಡರು. ಮುಂದೆ ಸ್ಮೃತಿ ಇರಾನಿಯವರ ಖಾತೆ ಬದಲಾಯಿತು. ಅನಂತಕುಮಾರ್ ತೀರಿಕೊಂಡರು. ಸಮಸ್ಯೆ ಇನ್ನೂ ಬಗೆಹರಿಯದೆ ಉಳಿದಿದೆ" ಎಂದು ಪುರುಷೋತ್ತಮ ಬಿಳಿಮಲೆಯವರು ಬೇಸರಪಡುತ್ತಾರೆ.

**ಕನ್ನಡಕ್ಕಾಗಿ ಕೈನೀಡು:**

ಕನ್ನಡದ ಬೆಳವಣಿಗೆಗೆ ನಿರ್ದಿಷ್ಟವಾದ ಕಾರ್ಯತಂತ್ರವು ಅವರ ಕಲ್ಪನೆಯಲ್ಲಿತ್ತು. ತಂತ್ರಜ್ಞಾನದಲ್ಲಿಯೂ ಕನ್ನಡದ ಬಳಕೆಯ ವಿಚಾರದಲ್ಲಿ ಅವರು ಅತೀವ ಆಸ್ಥೆಯನ್ನು ಹೊಂದಿದ್ದರು. ತಂತ್ರಜ್ಞಾನದಲ್ಲಿ ಕನ್ನಡವನ್ನು ಸರಳವಾಗಿ ಬಳಸುವಂತೆ ಯೂನಿಕೋಡ್ ನಿರ್ಮಾಣಕ್ಕೆ ಅವರು ಧನಸಹಾಯ ಮಾಡಿದ್ದರು. ಪುಸ್ತಕ ಪರಿಷೆಗಳನ್ನು ಏರ್ಪಡಿಸಿ ಸಾವಿರಾರು ಪುಸ್ತಕಗಳನ್ನು ಓದುಗರಿಗೆ ವಿತರಿಸಿದ್ದರು. ಕನ್ನಡ ಶಾಲೆಗಳ ಕಟ್ಟಡ ನಿರ್ಮಾಣ. ಮತ್ತು ಶೌಚಾಲಯ ವ್ಯವಸ್ಥೆಗಳಿಗೆ ಸಂಸದರ ನಿಧಿಯಿಂದ ಆದ್ಯತೆಯ ಮೇರೆಗೆ ಅನುದಾನ ನೀಡುತ್ತಿದ್ದರು. ಅದೇ ರೀತಿ, ಕನ್ನಡ ಸಂಸ್ಕೃತಿಯ ಆಧಾರ ಸ್ತಂಭಗಳಾಗಿರುವ ಭಜನಾ ಮಂದಿರಗಳು, ದೇವಾಲಯಗಳು, ಸಮುದಾಯ ಭವನಗಳು, ವಾಚನಾಲಯಗಳು, ಗ್ರಂಥಾಲಯಗಳ ನಿರ್ಮಾಣಕ್ಕೆ ಧಾರಾಳವಾಗಿ ಧನ ಸಹಾಯ ಮಾಡಿ ಪ್ರೋತ್ಸಾಹಿಸಿದ್ದರು.

ಕನ್ನಡ ಸಂಸ್ಕೃತಿಯ ಎಲ್ಲ ಪರಿಷೆಗಳಲ್ಲಿ ಉತ್ಸವಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದರು. ಬೆಂಗಳೂರು ವಿಧಾನ ಸಭಾ ಕ್ಷೇತ್ರಗಳ ಮಟ್ಟದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ಅವರು ಪ್ರೋತ್ಸಾಹ ನೀಡಿದರು.

"**ಕನ್ನಡದ ರಾಯಭಾರಿ:** ಅನಂತಕುಮಾರರ ರಾಜಕಾರಣ ಕೇವಲ ಚುನಾವಣೆಗೆ ಸೀಮಿತವಾಗಿತ್ತು, ರಾಷ್ಟ್ರದ ಅಥವಾ ನಾಡಿನ ಯಾವುದೇ ಅಭಿವೃದ್ಧಿಯಾಗಲಿ ರೈತರ ಯಾವುದೇ ಸಮಸ್ಯೆ ಬಂದಾಗ ಎನ್.ಡಿ.ಎ ಸರ್ಕಾರದಲ್ಲಿ ನಮ್ಮ ರಾಯಭಾರಿ ಅಂದರೆ ನಮ್ಮ ಅನಂತಕುಮಾರ್ ಅವರು. ಯಾವುದೇ ಸಮಸ್ಯೆ ಬಂದರೂ ಸಹ ನಾವು ಅನಂತಕುಮಾರರ ಸಹಾಯ ತೆಗೆದುಕೊಂಡು ಅದಕ್ಕೊಂದು ಪರಿಹಾರ ಕಂಡುಕೊಳ್ಳುತ್ತಿದೆವು" ಎನ್ನುವ ಮಾಜಿ ಸಚಿವ ಆರ್.ವಿ. ದೇಶಪಾಂಡೆಯವರು, ಬೆಂಗಳೂರಿಗೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸೌಲಭ್ಯವನ್ನು ಕಲ್ಪಿಸಬೇಕೆನ್ನುವ ಬೇಡಿಕೆಗೆ ಕೇಂದ್ರ ಸರ್ಕಾರದಿಂದ ಮಾನ್ಯತೆ ಲಭಿಸಿದ್ದೂ ಅನಂತಕುಮಾರರ ಪ್ರಯತ್ನದಿಂದಲೇ ಎಂದು ಕೃತಜ್ಞತೆ ಸಲ್ಲಿಸುತ್ತಾರೆ. ಈ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರಿನ ನಾಮಕರಣವಾದುದೂ ಅನಂತಕುಮಾರರ ಪ್ರಯತ್ನದಿಂದಲೇ. ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿಯವರು ಸ್ಮರಿಸುವಂತೆ, ದೆಹಲಿಯಲ್ಲಿ ಮೊದಲ ಸಲ ರಾಷ್ಟ್ರೀಯ ಮಟ್ಟದ ಉತ್ಸವವನ್ನು ಮಾಡಿದಾಗ ಸಾವಿರಾರು ಜನರನ್ನು ಕರೆದುಕೊಂಡು ಹೋಗಿ ರಾಷ್ಟ್ರ ಮಟ್ಟದಲ್ಲಿ ಕೆಂಪೇಗೌಡರನ್ನು ಪರಿಚಯಿಸುವ ಕೆಲಸ ಮಾಡಿದವರಲ್ಲಿ ಅನಂತ್ ಮೊದಲಿಗರು.



ಕೆಂಪೇಗೌಡರಿಗೆ ತಮ್ಮ ನಾಡಿನ ಬಗೆಗಿದ್ದ ಅಭಿಮಾನವೂ, ನಾಡನ್ನು ಕಟ್ಟಿ ಬೆಳೆಸಬೇಕೆಂಬ ಹಂಬಲವೂ ಅನಂತಕುಮಾರರಿಗೆ ಆದರ್ಶವೆನಿಸಿದ್ದ ಗುಣಗಳು. ಅಂತೆಯೇ ಶಿವಾಜಿಯ ಛಲ, ಸಂಕಲ್ಪ, ರಾಷ್ಟ್ರಪ್ರೇಮ, ಗುರಿ ಸಾಧಿಸುವ ಯೋಜನಾಚತುರತೆಗಳು ಅವರಿಗೆ ಬಹು ಇಷ್ಟವಾಗಿದ್ದವು. ಪ್ರಸ್ತಾಪಿಸಲು ಸಾಧ್ಯವಿದ್ದ ಸಂದರ್ಭದಲ್ಲೆಲ್ಲ ಅನಂತಕುಮಾರ ತಮ್ಮ ಭಾಷಣದಲ್ಲಿ ಶಿವಾಜಿಯನ್ನೂ ಕೆಂಪೇಗೌಡರನ್ನೂ ಸ್ಮರಿಸುವುದು ರೂಢಿಯಾಗಿತ್ತು.

ಇಂದು ಬ್ಯಾಂಕಿಂಗ್ ಸೇವೆಯ ನೇಮಕಾತಿ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಬರೆಯುವ ಅವಕಾಶವಿದೆ. ಇದು ಸಾಧ್ಯವಾಗಿರುವುದೂ ಅನಂತಕುಮಾರರ ಪ್ರಯತ್ನದಿಂದಲೇ. ಇದಕ್ಕಾಗಿ ಅವರು ಅಂದಿನ ಹಣಕಾಸು ಸಚಿವ ಅರುಣ್ ಜೈಟ್ಲಿಯವರನ್ನು ಭೇಟಿಯಾಗಿ ಅವರ ಮನವೊಲಿಸಿದ್ದರು. ಅವರು ಕನ್ನಡದ ಹೆಮ್ಮೆಯ ಬ್ಯಾಂಕ್ ಆಗಿದ್ದ ವಿಜಯಾಬ್ಯಾಂಕಿನ ಕಾರ್ಮಿಕ ಸಂಘವೊಂದರ ಗೌರವಾಧ್ಯಕ್ಷರೂ ಆಗಿದ್ದರು ಎಂಬುದು ಸ್ಮರಣೀಯ. ಈ ಕಾರ್ಮಿಕ ಸಂಘವು ಏರ್ಪಡಿಸಿದ್ದ ಬೃಹತ್ ಸಭೆಯೊಂದರಲ್ಲಿ ಬ್ಯಾಂಕ್ ಅಧಿಕಾರಿಗಳು ಕನ್ನಡದಲ್ಲಿ ವ್ಯವಹರಿಸುವ ಅಗತ್ಯ ಮತ್ತು ಅನಿವಾರ್ಯತೆಗಳನ್ನು ವಿವರಿಸಿ ಬ್ಯಾಂಕಿನ ಹಿರಿಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು.

ಕನ್ನಡದ ವಿಷಯಕ್ಕಾಗಿ ದೆಹಲಿಗೆ ಬರುವ ಎಲ್ಲ ನಿಯೋಗಗಳಿಗೂ ಅನಂತಕುಮಾರರೇ ಅತಿಥ್ಯ ನೀಡುತ್ತಿದ್ದರು. ಹೊರನಾಡ ಕನ್ನಡಿಗರು, ಸಾಹಿತ್ಯ ಪರಿಷತ್ತಿನ ಅನುದಾನ, ಸಾಂಸ್ಕೃತಿಕ ಕಟ್ಟಡಗಳಿಗೆ ಅನುದಾನ, ಶಾಸ್ತ್ರೀಯ ಸ್ಥಾನಮಾನ, ಕನ್ನಡ ನೆಲ ಜಲದ ಸಂರಕ್ಷಣೆ ಮುಂತಾದ ಹತ್ತು ಹಲವು ಬೇಡಿಕೆಗಳನ್ನು ಮುಂದಿರಿಸಿಕೊಂಡು ಬರುವವರಿಗೆ ತಮ್ಮ ದೆಹಲಿ ಮನೆಯಲ್ಲಿ ವಸತಿಯ ಅನುಕೂಲ ಮಾಡಿಕೊಡುವುದಲ್ಲದೆ ಅವರನ್ನು ಸಂಬಂಧಿಸಿದ ಇಲಾಖೆಗಳಿಗೆ ಖುದ್ದಾಗಿ ಕರೆದೊಯ್ಯುತ್ತಿದ್ದರು, ಮಂತ್ರಿಗಳ ಜೊತೆಗೆ ಭೇಟಿಯನ್ನೂ ಏರ್ಪಡಿಸುತ್ತಿದ್ದರು.

ಅರಮನೆ ಮೈದಾನದಲ್ಲಿ ನಡೆದ ವಿಶ್ವ ಕನ್ನಡಿಗರ ಜಾಗೃತಿ ಸಮ್ಮೇಳನಕ್ಕೆ ಸಂಪೂರ್ಣ ಮಾರ್ಗದರ್ಶನ ನೀಡಿದ ಅನಂತಕುಮಾರ್ ಆ ಸಂದರ್ಭದಲ್ಲಿ ೪೨ ದೇಶಗಳ ಕನ್ನಡ ಸಂಘಗಳನ್ನು ಖುದ್ದಾಗಿ ಸಂಪರ್ಕಿಸಿ ಅವರೆಲ್ಲರೂ ಸಮ್ಮೇಳನದಲ್ಲಿ ಭಾಗವಹಿಸುವಂತೆ ಮಾಡಿದ್ದರು. ಕನ್ನಡದ ವಿಷಯದಲ್ಲಿ ಅನಂತಕುಮಾರರ ಸಂಪರ್ಕ ಜಾಲ ಎಷ್ಟು ವಿಶಾಲವಾಗಿತ್ತು ಎಂಬುದನ್ನೂ ಇದು ಸೂಚಿಸುತ್ತದೆ.

ಕನ್ನಡದ ಮೇಲಿನ ಅನಂತಕುಮಾರರ ಪ್ರೀತಿ ಕೇವಲ ಮಾತಿನ ಮಟ್ಟದಲ್ಲಿರಲಿಲ್ಲ; ಅದು ಅವರ ಬದುಕಿನ ನಡತೆಯಲ್ಲೂ, ಕಾರ್ಯಶೈಲಿಯಲ್ಲೂ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಶಾಸ್ತ್ರೀಯ ಕನ್ನಡ ಸ್ಥಾನಮಾನ, ಕರ್ನಾಟಕ ಸಂಘಗಳ ಬಲವರ್ಧನೆ, ಕನ್ನಡ ಪುಸ್ತಕಗಳ ಪ್ರಚಾರ, ಕನ್ನಡ ಶಾಲೆಗಳ ಹಾಗೂ ಸಾಂಸ್ಕೃತಿಕ ಕೇಂದ್ರಗಳ ನಿರ್ಮಾಣ – ಇವೆಲ್ಲವೂ ಕನ್ನಡವನ್ನು ರಾಷ್ಟ್ರ ಮತ್ತು ಜಾಗತಿಕ ಮಟ್ಟದಲ್ಲಿ ಗೌರವಿಸಲಾಗುವ ಭಾಷೆಯನ್ನಾಗಿ ಮಾಡಲು ಅವರು ಕೈಗೊಂಡ ಮಹತ್ವದ ಸಾಧನೆಗಳಾಗಿವೆ. ರಾಜಕಾರಣಿಯೆಂಬ ಹುದ್ದೆ ಅವರಿಗೆ ಒಂದು ಜವಾಬ್ದಾರಿ ಆದರೆ, ಕನ್ನಡದ ರಾಯಭಾರಿಯಾಗಿರುವುದು ಅವರಿಗೆ ಜೀವನಧರ್ಮ. ನಿಜವಾದ 'ಕನ್ನಡ ರಾಯಭಾರಿ'ಯಾಗಿದ್ದ ಅನಂತಕುಮಾರ್ ಅವರು, ಕನ್ನಡದ ಬೆಳವಣಿಗೆಗಾಗಿ ಅಚಲವಾಗಿ ಶ್ರಮಿಸಿದ, ದೂರದೃಷ್ಟಿಯ ಮತ್ತು ಕ್ರಿಯಾಶೀಲ ನಾಯಕರಾಗಿ ಕರ್ನಾಟಕದ ಇತಿಹಾಸದಲ್ಲಿ ಅಜರಾಮರರಾಗಿ ಉಳಿಯುತ್ತಾರೆ.

# ಸಂಘಟನಾ ಚತುರ, ಅನಂತ ಕುಮಾರ್ - ಪಕ್ಷ ಕಟ್ಟಿದ ಧೀಮಂತ ನಾಯಕ

ನಾನು ಕಂಡಂತೆ



ಅನಂತಕುಮಾರ್

ಶ್ರೀಯುತ ಅನಂತಕುಮಾರ್ ಅವರನ್ನು ನಾನು ಮೊದಲ ಬಾರಿಗೆ ಭೇಟಿಯಾಗಿದ್ದು, ರೈತ ನಾಯಕ ಎಂ.ಎಸ್.ಕೆ. ಶಾಸ್ತ್ರಿಯವರೊಂದಿಗೆ. ಅದು ಬೆಂಗಳೂರಿನ ಕಾಟನ್ ಪೇಟೆಯ ಬಾಡಿಗೆ ಕಟ್ಟಡದಲ್ಲಿದ್ದ ಭಾರತೀಯ ಜನತಾ ಪಕ್ಷದ (ಬಿಜೆಪಿ) ಕಚೇರಿಯಲ್ಲಿ. ಆಗಲೇ ಅವರ ಮೊನಚು ಮಾತು, ಗೂಢಾರ್ಥದ ಭಾಷೆ ಮತ್ತು ಅಭಿಮಾನಪೂರ್ವಕವಾದ ನಡವಳಿಕೆಯಿಂದ ನಾನು ಪ್ರಭಾವಿತನಾಗಿದ್ದೆ.

ಭಾರತೀಯ ಜನತಾ ಪಾರ್ಟಿ (ಬಿ.ಜೆ.ಪಿ.) ಕರ್ನಾಟಕದಲ್ಲಿ ಒಂದು ಪ್ರಬಲ ಶಕ್ತಿಯಾಗಿ ಬೆಳೆಯಲು ಕಾರಣರಾದ ಅಗ್ರಮಾನ್ಯ ನಾಯಕರಲ್ಲಿ ದಿವಂಗತ ಶ್ರೀ ಅನಂತಕುಮಾರ್ ಅವರ ಪಾತ್ರ ಅಜರಾಮರ. ಅವರ ಸಂಘಟನಾ ಕೌಶಲ, ಕಾರ್ಯಕರ್ತರೊಂದಿಗಿನ ಆತ್ಮೀಯತೆ, ಮತ್ತು ಮಾತಿನ ಮೋಡಿ ಪಕ್ಷವನ್ನು ತಳಮಟ್ಟದಿಂದಲೇ ಸದೃಢಗೊಳಿಸಲು ಮಹತ್ತರ ಕೊಡುಗೆ ನೀಡಿತು.

ಅನಂತಕುಮಾರ್ ಅವರ ವ್ಯಕ್ತಿತ್ವದಲ್ಲಿ ಎದ್ದು ಕಾಣುತ್ತಿದ್ದ ಮುಖ್ಯ ಅಂಶಗಳೆಂದರೆ: ಮಾತಿನ ಮೋಡಿ: ಅವರ ಮಾತಿನ ಸೆಳೆತ, ಮಾತಿಗೆ ತಕ್ಕದ್ದಾದ ಹಾವಭಾವ, ಮಾತಿನ ಮೊನಚು ಮತ್ತು ಸ್ಪಷ್ಟತೆಯುಳ್ಳ ಉಚ್ಚಾರಣೆ ಕಾರ್ಯಕರ್ತರನ್ನು ಮತ್ತು ಸಾರ್ವಜನಿಕರನ್ನು ಸಮ್ಮೋಹನಗೊಳಿಸುತ್ತಿತ್ತು ಮತ್ತು ಕಾರ್ಯಕರ್ತರ ಕಾಳಜಿ: ಅವರು ಪ್ರತಿಯೊಬ್ಬ ಕಾರ್ಯಕರ್ತನನ್ನು ಹೆಸರು ಹೇಳಿ ಕರೆಯುವ ಆತ್ಮೀಯ ಭಾವ ಹೊಂದಿದ್ದರು. ಪಕ್ಷದ ಬೆಳವಣಿಗೆಗಾಗಿ ಕಾರ್ಯಕರ್ತರ ಬೆಳವಣಿಗೆಯ ಬಗ್ಗೆ ಅವರು ವಿಶೇಷ ಕಾಳಜಿ ವಹಿಸುತ್ತಿದ್ದರು.

ಶ್ರೀ ಅನಂತಕುಮಾರ್ ಅವರ ವ್ಯಕ್ತಿತ್ವದಲ್ಲಿ ಎದ್ದು ಕಾಣುತ್ತಿದ್ದ ಮುಖ್ಯ ಅಂಶಗಳೆಂದರೆ ಅವರ ಮಾತಿನ ಮೋಡಿ. ಅವರ ಮಾತಿನ ಸೆಳೆತ, ಮಾತಿಗೆ ತಕ್ಕದ್ದಾದ ಹಾವಭಾವ, ಮಾತಿನ ಮೊನಚು ಮತ್ತು ಸ್ಪಷ್ಟತೆಯುಳ್ಳ ಉಚ್ಚಾರಣೆಯು ಕಾರ್ಯಕರ್ತರನ್ನು ಮತ್ತು ಸಾರ್ವಜನಿಕರನ್ನು ಸಮ್ಮೋಹನಗೊಳಿಸುತ್ತಿತ್ತು. ಇದರ ಜೊತೆಗೆ, ಅವರಿಗೆ ಕಾರ್ಯಕರ್ತರ ಮೇಲೆ ಅಪಾರ ಕಾಳಜಿ ಇತ್ತು. ಅವರು ಪ್ರತಿಯೊಬ್ಬ ಕಾರ್ಯಕರ್ತನನ್ನು ಹೆಸರು ಹೇಳಿ ಕರೆಯುವ ಆತ್ಮೀಯ ಭಾವ ಹೊಂದಿದ್ದರು. ಪಕ್ಷದ ಬೆಳವಣಿಗೆಗಾಗಿ ಕಾರ್ಯಕರ್ತರ ಬೆಳವಣಿಗೆಯ ಬಗ್ಗೆಯೂ ಅವರು ವಿಶೇಷ ಕಾಳಜಿ ವಹಿಸುತ್ತಿದ್ದರು.

ಸಂಘಟನೆಯ ಸೂತ್ರಧಾರಿ

ಶ್ರೀಯುತ ಯಡಿಯೂರಪ್ಪನವರು ರೈತಪರ ಹೋರಾಟದಿಂದ ಪಕ್ಷ ಕಟ್ಟಲು ಶ್ರಮಿಸಿದರೆ, ಅನಂತ್ ಕುಮಾರ್ ಅವರು ಪಕ್ಷದ ಬೆಳವಣಿಗೆಗೆ ಪೂರಕವಾಗಿ ಸಿದ್ಧಾಂತಗಳೊಟ್ಟಿಗೆ ಕಾರ್ಯಕರ್ತರು ಬೆಳೆಯಬೇಕು ಎಂಬ ಮಹೋನ್ನತ ಉದ್ದೇಶದಿಂದ ಕಾರ್ಯಕರ್ತರ ಸಮಾವೇಶ ಹಾಗೂ ಅಭ್ಯಾಸವರ್ಗಗಳನ್ನು ಏರ್ಪಡಿಸುವುದು ಅವರ ಆಲೋಚನಾ ಕ್ರಮವಾಗಿತ್ತು.

ನಾನು ಬಿ.ಜೆ.ಪಿ. ತಾಲ್ಲೂಕು ಪ್ರಧಾನ ಕಾರ್ಯದರ್ಶಿಯಾಗಿದ್ದಾಗ, ಬೆಂಗಳೂರಿನ ಕೇಶವ ಕೃಪದಲ್ಲಿ ನಡೆದ ಅಭ್ಯಾಸ ವರ್ಗವೊಂದರ ಉದಾಹರಣೆ ಗಮನಾರ್ಹ. ಅಲ್ಲಿ ಶ್ರೀಯುತರು ನೀಡಿದ ಸೂಚನೆಯಂತೆ, ಪ್ರತಿ ತಾಲ್ಲೂಕಿನ ಕೇಂದ್ರದ ಆವರಣದಲ್ಲಿ ಭಾರತೀಯ ಜನತಾ ಪಾರ್ಟಿಯ ಸೇವಾಕೇಂದ್ರ ತೆರೆದದ್ದು ಒಂದು ಕ್ರಾಂತಿಕಾರಿ ಹೆಜ್ಜೆಯಾಯಿತು. ರೈತರುಗಳಿಗೆ ಮತ್ತು ಸಾಮಾನ್ಯ ಜನತೆಗೆ ಸರ್ಕಾರದಿಂದ ಆಗಬೇಕಿರುವ ಕೆಲಸಗಳನ್ನು ಅರ್ಜಿ ಬರೆಯುವುದರಿಂದ ಹಿಡಿದು, ಸರ್ಕಾರಿ ಕಛೇರಿಗಳಲ್ಲಿನ ಕೆಲಸಗಳು ಸುಲಲಿತವಾಗಿ, ಅಡೆತಡೆ ಇಲ್ಲದೆ ನೆರವೇರಲು ಈ ಸೇವಾ ಕೇಂದ್ರಗಳು ನೆರವಾದವು. ಈ ರೀತಿಯ ಕಾರ್ಯಚಟುವಟಿಕೆಯಿಂದಾಗಿ, ಬಿ.ಜೆ.ಪಿ.ಯು ತಾಲ್ಲೂಕು ಮಟ್ಟದಲ್ಲಿ ಸದೃಢವಾಗಿ ಬೆಳೆಯಲು ಅನಂತಕುಮಾರ್‌ರವರ ಅಭ್ಯಾಸ ವರ್ಗದ ಸಲಹೆ-ಸೂಚನೆಗಳು ಸಕಾರಣವಾಗಿ, ಪಕ್ಷವು ಅಧಿಕಾರಕ್ಕೆ ಬರಲು ದೊಡ್ಡ ಕಾರಣವಾದವು ಎಂಬುದರಲ್ಲಿ ಸಂಶಯವಿಲ್ಲ.

ಶ್ರೀಯುತರು ಪಕ್ಷವನ್ನು ರಾಜ್ಯದಲ್ಲಿ ಕಾರ್ಯಕರ್ತರ ಪಕ್ಷವಾಗಿ ಬೆಳೆಸಿದ್ದಲ್ಲದೆ, ತಾವೂ ಒಬ್ಬ ಸಮರ್ಥ ನಾಯಕರಾಗಿ ಹೊರಹೊಮ್ಮಿದರು. ಕೇಂದ್ರದಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರ ಸಂಪುಟದಲ್ಲಿ ಸಂಪುಟ ದರ್ಜೆಯ ಸಚಿವರಾಗಿ ಕಾರ್ಯನಿರ್ವಹಿಸಿದರು. ಅವರ ಅಧಿಕಾರಾವಧಿಯ ಮಹತ್ವದ ಕೀರ್ತಿಗಳಲ್ಲಿ ಒಂದು - ರಾಜ್ಯದ ಹೆದ್ದಾರಿಗಳ ಸುಲಲಿತ ಸಂಚಾರಕ್ಕಾಗಿ ಅವುಗಳನ್ನು ನಾಲ್ಕು ಪಥದ ( ಸುವರ್ಣ ಚತುಶ್ಪಥ ರಸ್ತೆ) ದ್ವಿಮುಖ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸಿದ್ದು. ದಾವಣಗೆರೆಯಲ್ಲಿ ನಡೆದ ಸಮಾವೇಶದಲ್ಲಿ ಈ ವಿಷಯ ವಿವರಿಸುವಾಗ, ಅವರು 'ಕ್ವಾಡ್ರಿಲ್ಯಾಟ್ರಲ್' (Quadrilateral) ಎಂಬ ಶಬ್ದವನ್ನು ಉಚ್ಚರಿಸಿದ ಪರಿ, ಆ ಪರಿಭಾಷೆ, ಅವರ ಹಾವ-ಭಾವದೊಂದಿಗೆ ಸಮ್ಮಿಲಿತವಾಗಿ ಹೊರಹೊಮ್ಮಿದ ರೀತಿ ಇಂದಿಗೂ ನಿಮ್ಮ ಸ್ಮೃತಿಪಟಲದಲ್ಲಿ ಅಚ್ಚಳಿಯದೆ ಉಳಿದಿದೆ.

**-ಬಿ ಎಂ ಷಣ್ಮುಖಯ್ಯ**
**ದಾವಣಗೆರೆ**




ಶ್ರೀ ಅನಂತಕುಮಾರ್ ಅವರು ಕೇವಲ ರಾಜಕಾರಣಿಯಲ್ಲ, ಬದಲಿಗೆ ಪಕ್ಷದ ಸಿದ್ಧಾಂತ ಮತ್ತು ಸಂಘಟನೆಯ ಶಕ್ತಿಯನ್ನು ಪ್ರತಿ ಕಾರ್ಯಕರ್ತನಲ್ಲಿ ತುಂಬಿ, ಪಕ್ಷವನ್ನು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಅಧಿಕಾರದ ಗದ್ದುಗೆಗೆ ಏರಿಸಲು ಅಹರ್ನಿಶಿ ಶ್ರಮಿಸಿದ ಧೀಮಂತ ನಾಯಕ. ಅವರ ಈ ಕಾರ್ಯತಂತ್ರ ಮತ್ತು ದೂರದೃಷ್ಟಿಯ ಫಲವನ್ನು ಇಂದಿಗೂ ಬಿ.ಜೆ.ಪಿ. ಪಡೆಯುತ್ತಿದೆ. ಅವರ ಈ ಸೇವೆಯನ್ನು ಕರ್ನಾಟಕದ ರಾಜಕೀಯ ಇತಿಹಾಸ ಎಂದಿಗೂ ಮರೆಯಲಾರದು.

◆

## ಅನ್ನದಾನ ಸೇವಾ ಕಾರ್ಯ

ಅದಮ್ಯಚೇತನ ಸಂಸ್ಥೆಯು ಬೆಂಗಳೂರು, ಅಯೋಧ್ಯೆ, ಕಲಬುರಗಿ ಮತ್ತು ಹುಬ್ಬಳ್ಳಿ ನಗರಗಳಲ್ಲಿ ನಿರಂತರವಾಗಿ ನಿತ್ಯ ಅನ್ನದಾನ ಕಾರ್ಯಕ್ರಮವನ್ನು ನಡೆಸುತ್ತಿದೆ. ಈ ಉಪಕ್ರಮದ ಮುಖ್ಯ ಗುರಿ, ಅಗತ್ಯವಿರುವ ಜನರಿಗೆ ಪ್ರತಿ ದಿನ ರುಚಿಕರವಾದ ಮತ್ತು ಪೌಷ್ಟಿಕಾಂಶಯುಕ್ತ ಭೋಜನ ಸೌಲಭ್ಯವನ್ನು ಒದಗಿಸುವುದಾಗಿದೆ.

ಬೆಂಗಳೂರು ನಗರದಲ್ಲಿ ಈ ಸೇವಾ ಕಾರ್ಯವು ಗವಿಪುರ, ನಗರ್ತಪೇಟೆ, ಮಾರೇನಹಳ್ಳಿ, ಜಯನಗರ, ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಹಲಸೂರು, ಮತ್ತು ಅನಂತ ಸ್ಮೃತಿ ವನ (ಲಾಲ್‌ಬಾಗ್) ಸೇರಿದಂತೆ ಹಲವು ಪ್ರಮುಖ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಮೂಲಕ ನಿತ್ಯವೂ ಸಾವಿರಾರು ಜನರಿಗೆ ಆಹಾರದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ

ಈ ಮಹಾನ್ ಸೇವಾ ಕಾರ್ಯದಲ್ಲಿ ನೀವು ಸಹ ಭಾಗವಹಿಸಿ ಸಹಕರಿಸಬಹುದು. ಸಂಸ್ಥೆಯು ದಾನಿಗಳ ನೆರವಿನಿಂದ ಈ ಅನ್ನದಾನ ಕಾರ್ಯಕ್ರಮವನ್ನು ಮುಂದುವರೆಸಿಕೊಂಡು ಹೋಗುತ್ತಿದೆ. ಜೋಧಪುರ ಮತ್ತು ಅಯೋಧ್ಯೆಯಲ್ಲಿ ಒಂದು ದಿನದ ಕೇಂದ್ರದ ಅನ್ನದಾನ ಸೇವೆಗೆ ₹ 5,000 ರೂಪಾಯಿ ದೇಣಿಗೆ ನೀಡಬಹುದು. ಹಾಗೆಯೇ, ಕರ್ನಾಟಕದ ಕೇಂದ್ರಗಳಾದ ಬೆಂಗಳೂರು, ಕಲಬುರಗಿ ಮತ್ತು ಹುಬ್ಬಳ್ಳಿಯಲ್ಲಿ ಒಂದು ದಿನದ ಸೇವೆಗಾಗಿ ₹ 2,500 ರೂಪಾಯಿ ದೇಣಿಗೆ ನೀಡಿ ಈ ಕಾರ್ಯದಲ್ಲಿ ಪಾಲ್ಗೊಳ್ಳಬಹುದು. ದೇಣಿಗೆ ಮತ್ತು ಕಾರ್ಯಕ್ರಮದ ಕುರಿತ ಹೆಚ್ಚಿನ ವಿವರಗಳನ್ನು **www.adamyachetana.org** ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದು.






# ಚಿಣ್ಣರ ಚೇತನ

ಮಕ್ಕಳಿಗಾಗಿ ರೂಪಿತವಾದ ವಿಶೇಷ ಪುಟಗಳು

ಪ್ರಕಾಶಕರು:
ಶ್ರೀಮತಿ ತೇಜಸ್ವಿನಿ ಅನಂತಕುಮಾರ್
ಅಧ್ಯಕ್ಷರು, ಅದಮ್ಯ ಚೇತನ


## ಗುರಿ ಸರಿ ಇದ್ದರೆ ಛಲವೇ ಬಲ...



ಗಿರೀಶ್ ಶರ್ಮಾ ಹೆಸರಿನ ಬ್ಯಾಡ್ಮಿಂಟನ್ ಚಾಂಪಿಯನ್ ಬಗ್ಗೆ ಗೊತ್ತೆ? ಎರಡು ವರ್ಷದ ಮಗುವಾಗಿದ್ದಾಗಲೇ ರೈಲು ಅಪಘಾತದಲ್ಲಿ ಕಾಲು ಕಳೆದುಕೊಂಡ ಬಾಲಕ ಶಾಲೆಯಲ್ಲಿ ಬ್ಯಾಡ್ಮಿಂಟನ್ ಆಡುವವರನ್ನು ನೋಡುತ್ತ ತಾನೂ ಆಟಕ್ಕೆ ಇಳಿದ. ಒಂಟಿ ಕಾಲಲ್ಲೇ ಬ್ಯಾಡ್ಮಿಂಟನ್ ಆಟದ ತಾಲೀಮು ನಡೆಸಿದ. ವಿಶೇಷ ಚೇತನರಿಗೆಂದೇ ನಡೆಸುವ ಕ್ರೀಡೆಗಳಲ್ಲಿ ಪದಕ ಪಡೆಯುತ್ತ 16ನೇ ವಯಸ್ಸಿನಲ್ಲಿ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್ ಆದ. ಅದೂ ಸತತ ಏಳು ಬಾರಿ! ಇಸ್ರೇಲ್, ದುಬೈನಲ್ಲಿ ನಡೆದ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಚಿನ್ನದ ಪದಕ, ಪ್ಯಾರಾ ಏಷ್ಯನ್ ಕ್ರೀಡಾಕೂಟದಲ್ಲಿ ಎರಡು ಚಿನ್ನದ ಪದಕಗಳು (ಸಿಂಗಲ್ಸ್ ಮತ್ತು ಡಬಲ್ಸ್) ಕೂಡ ಮಡಿಲಿಗೆ ಬಂತು. ಮಧ್ಯಪ್ರದೇಶದ ಪಿಪ್ಲಿಯಾ ಪಟ್ಟಣದಲ್ಲಿ ಜನಿಸಿದ ಗಿರೀಶ್ ಈಗ 40ರ ಹರಯದಲ್ಲಿದ್ದಾರೆ. ದೈಹಿಕ ವೈಫಲ್ಯವನ್ನು ಮೆಟ್ಟಿ ನಿಂತು ಯಶಸ್ಸು ಸಾಧಿಸುವುದು ಹೇಗೆಂದು ಅವರು ಶಾಲಾ ಕಾಲೇಜುಗಳ ಯುವಜನರಿಗೆ ಪ್ರೇರಣೆಯ ಪಾಠಗಳನ್ನು ಹೇಳುತ್ತಾರೆ.

ಡಿಸೆಂಬರ್ 3ರಂದು 'ವಿಶ್ವ ವಿಶೇಷ ಚೇತನರ ದಿನ'. ದೇಹದಲ್ಲಿ ಏನೇ ಊನವಿದ್ದರೂ ಅದನ್ನು ಮೀರಿ ನಿಲ್ಲಬಲ್ಲವರ ಉದಾಹರಣೆ ನಮಗೆ ಗೊತ್ತಿರಬೇಕು. ಅಂಥವರು ಎಳೇ ಮಕ್ಕಳಾಗಿದ್ದರೆ ನಾವು ಅವರನ್ನು ಲೇವಡಿ ಮಾಡುವ ಬದಲು ಗಿರೀಶ್ ಅಥವಾ ಶೀತಲ್ ದೇವಿಯಂಥವರ ಸಾಧನೆಯ ಕತೆ ಹೇಳಬೇಕು.

## ಟೈ ಎಂಬುದು ಚಳಿಗಾಲಕ್ಕೇ ಸೈ



ನಿಮ್ಮ ಶಾಲೆಯ ಸಮವಸ್ತ್ರದ ಜೊತೆ ಟೈ ಕೂಡ ಕಟ್ಟಿಕೊಳ್ಳಬೇಕೆಂಬ ನಿಯಮ ಇದೆಯೆ? ಇದ್ದರೆ ಅದನ್ನು ತುಸು ಸಡಿಲ ಮಾಡಿಕೊಳ್ಳಿ! ಏಕೆಂದರೆ ತುಂಬ ಹೊತ್ತು ಟೈ ಕಟ್ಟಿಕೊಂಡಿದ್ದರೆ ಮಿದುಳಿಗೆ ರಕ್ತ ಪೂರೈಕೆ ತುಸು ಕಡಿಮೆ ಆಗುತ್ತದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಟೈ ಕಟ್ಟುವುದರಿಂದ ಕುತ್ತಿಗೆಯ ನರಗಳ ಮೇಲೆ ಒತ್ತಡ ಬೀಳುತ್ತದೆ; ಅದರಿಂದ ಮಿದುಳಿಗೆ ಶೇಕಡಾ 7.2ರಷ್ಟು ರಕ್ತ ಪೂರೈಕೆ ಕಡಿಮೆ ಆಗುತ್ತದೆ. ಇದರಿಂದ ಕೆಲವರಿಗೆ ತಲೆಸುತ್ತು, ತಲೆನೋವು, ಕೆಲವೊಮ್ಮೆ ವಾಕರಿಕೆ ಉಂಟಾಗುವ ಸಂಭವವೂ ಇರುತ್ತದೆ. ತುಸು ಜಾಸ್ತಿ ಬಿಗಿಯಾಗಿ ಕಟ್ಟಿದ್ದರೆ ಕಣ್ಣಿನ ಮೇಲೆ ನರಗಳ ಬಿಗಿತ ಕೂಡ ಜಾಸ್ತಿ ಇರುತ್ತದೆ. ಟೈ ಕಟ್ಟಿರುವುದ ಕಡ್ಡಾಯವಾಗಿದ್ದರೆ ಆಗಾಗ ಅದನ್ನು ತುಸು ಸಡಿಲ ಮಾಡಿಕೊಳ್ಳುತ್ತಿರಬೇಕು.

ಕುತ್ತಿಗೆಗೆ ಟೈ ಕಟ್ಟುವ ಪದ್ಧತಿ ಏಕೆ ಬಂತು ಗೊತ್ತೆ? ಪಾಶ್ಚಾತ್ಯ ದೇಶಗಳಲ್ಲಿ ಚಳಿ ತೀವ್ರ ಇರುತ್ತದೆ. ಹೊರಗಡೆ ದುಡಿಯಲು ಹೋಗುವ ಗಂಡಸರು ಕುತ್ತಿಗೆ ಭಾಗ ಬೆಚ್ಚಗೆ ಇರಲೆಂದು ವಸ್ತ್ರವನ್ನು ಕಟ್ಟಿಕೊಳ್ಳುವ ಪದ್ಧತಿ ಪುರಾತನ ಕಾಲದಿಂದಲೂ ಇತ್ತು. ಅದೇ ಒಂದು 'ಶಿಸ್ತು' ಎಂಬುದಾಗಿ ನಡೆದು ಬಂದಿದೆ. ಅದು ನಮ್ಮ ದೇಶಕ್ಕೂ ಬಂದಿದೆ. ಅದರಲ್ಲೂ ಹೆಣ್ಣುಮಕ್ಕಳಿಗೂ ಟೈ, ಬಿಸಿಲ ತಾಪದಲ್ಲೂ ಟೈ ಎಂಬಂತಾಗಿದೆ, ಇರಲಿ.

ಅನೇಕ ಮಕ್ಕಳು ದಿನವೂ ಶುಭ್ರ ಸಮವಸ್ತ್ರವನ್ನೇ ಧರಿಸಿದರೂ ಟೈ ಮಾತ್ರ ವಾರಗಟ್ಟಲೆ ಬದಲಿಸುವುದಿಲ್ಲ, ತೊಳೆಯುವುದೂ ಇಲ್ಲ. ಹಾಗಾಗಿ ಏಕಾಣುಜೀವಿಗಳು ಸಂಗ್ರಹವಾಗುವ, ಬೆವರಿನ ಜೊತೆ ಅವು ಬೆಳೆಯುವ ಸಂಭವವೂ ಇರುತ್ತದೆ.

## ಜಗತ್ತಿನ ಅತಿ ಎತ್ತರದ ಪರ್ವತ ಎವರೆಸ್ಟ್ ಅಲ್ಲ!



ಸಮುದ್ರ ಮಟ್ಟದಿಂದ ಅಳೆದರೆ, ಹೌದು, 8,849 ಮೀಟರ್ ಎತ್ತರದ ಎವರೆಸ್ಟ್ ಪರ್ವತವೇ ಅತಿ ಎತ್ತರದ್ದು. ಆದರೆ ನಿಲ್ಲಿ! ಸಮುದ್ರ ತಳದಿಂದ ಎದ್ದು ನಿಂತ ಇನ್ನೆರಡು ಜ್ವಾಲಾಮುಖಿ ಪರ್ವತಗಳು ಇನ್ನೂ ಎತ್ತರದ್ದಾಗಿವೆ. ಹವಾಯಿ ದ್ವೀಪ ಸಮೂಹಕ್ಕೆ ಸೇರಿದ ಮೌಂಟ್ ಕಿಯಾ 10,203 ಮೀಟರ್ ಎತ್ತರದ್ದು. ಅದು ನಿದ್ರಿತ ಜ್ವಾಲಾಮುಖಿ. ಅದರ ಸಮೀಪವೇ ಇರುವ (9,351 ಮೀ.) ಮೌನಾ ಲೋವಾ ಪರ್ವತದ ತುದಿಯಲ್ಲಿ ಆಗಾಗ ಜ್ವಾಲಾಮುಖಿ ಕಕ್ಕುತ್ತ ಈಗಲೂ ಬೆಳೆಯುತ್ತಲೇ ಇದೆ. ಇವೆರಡೂ ಮಹಾ ಪರ್ವತಗಳ ಭಾರದಿಂದಾಗಿ ಸಮುದ್ರ ತಳವೂ ಕುಸಿಯುತ್ತಿದೆ.

ಡಿಸೆಂಬರ್ 11 'ಜಾಗತಿಕ ಪರ್ವತಗಳ ದಿನ'. ಅಂದರೆ ಆ ದಿನ ಶಾಲಾ ಮಕ್ಕಳು ತಮ್ಮ ಸಮೀಪದ ಯಾವುದಾದರೂ ಗುಡ್ಡ ಅಥವಾ ಬೆಟ್ಟಕ್ಕೆ ಹೋಗಬೇಕು. ಅಲ್ಲಿರುವ ಸಸ್ಯ, ಪ್ರಾಣಿಪಕ್ಷಿಗಳನ್ನು ಮತ್ತು ಜಲಮೂಲಗಳನ್ನು ಗುರುತಿಸಬೇಕು. ಪರ್ವತಗಳು ಚಿಕ್ಕದಿರಲಿ, ದೊಡ್ಡದಿರಲಿ ಹೇಗೆ ಪರಿಸರ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂಬುದನ್ನು ಶಿಕ್ಷಕರಿಂದ ಕೇಳಿ ತಿಳಿಯಬೇಕು. ಅದರ ಬಗ್ಗೆ ಕತೆ-ಕವನ ಅಥವಾ ಚಿತ್ರ ಬರೆಯಬೇಕು. ಗುಡ್ಡಗಳು ಪರಿಸರದ ಪವಿತ್ರ ಸ್ಥಳಗಳು. ಅಲ್ಲಿ ಗಣಿಗಾರಿಕೆ, ಕಳ್ಳಬೇಟೆ, ತಿಪ್ಪೆ ಸುರಿಯುವ ಕೆಲಸ ನಡೆಯಬಾರದು. ಬದಲಿಗೆ ಅಲ್ಲಿರುವ ಅಮೂಲ್ಯ ಗಿಡಮೂಲಿಕೆಗಳನ್ನು ಪತ್ತೆ ಹಚ್ಚಿ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ಇವರಿಗೆ ಈಗಾಗಲೇ ಅನೇಕ ಜಾಗತಿಕ ಪ್ರಶಸ್ತಿಗಳು ಲಭಿಸಿವೆ. ಬಾಳೆಯ ದಿಂಡನ್ನು ಜಜ್ಜಿದರೆ ಅದಕ್ಕೆ "ಪಲ್ಪ್" (pulp) ಎನ್ನುತ್ತಾರೆ. ಕಲ್ಪವೃಕ್ಷ ಎನಿಸಿದ್ದ ಬಾಳೆ ಜಿನಾಲಿಯ ದೆಸೆಯಿಂದ ಈಗ ಪಲ್ಪವೃಕ್ಷವಾಗಿದೆ.

## ಒಂಭತ್ತು ಮಿದುಳುಗಳ, ಎಂಟು ಕೈಗಳ ಬಂಟ ಆಕ್ಟೊಪಸ್



ಸಮುದ್ರದಲ್ಲಿ ಜೀವಿಸುವ ಅಕ್ಟೊಪಸ್ (ಅಷ್ಟಪಾದಿ) ಜೀವಿಯ ಚಮತ್ಕಾರವನ್ನು ಎಷ್ಟು ವರ್ಣಿಸಿದರೂ ಸಾಲದು. ಅದರ ಎಂಟೂ ತೋಳುಗಳು ಏಕಕಾಲದಲ್ಲಿ ಎಂಟು ವಿಭಿನ್ನ ಕೆಲಸಗಳನ್ನು ಮಾಡಬಲ್ಲವು. ಬೇಟೆ ಸಿಕ್ಕಾಗ ಒಂದೆರಡು ತೋಳುಗಳು ನೀಲಿಬಣ್ಣದ ಶಾಯಿಯನ್ನು ಆ ಬಡಪಾಯಿಯತ್ತ ಕಕ್ಕುತ್ತವೆ; ಇನ್ನು ಕೆಲವು ತೋಳುಗಳು ಅದನ್ನು ಹಿಡಿದು ಕೊಕ್ಕಿನಂಥ ಬಾಯಿಗೆ ತುರುಕುತ್ತವೆ. ಕೊಕ್ಕು ಆಗಾಗ ವಿಷವನ್ನೂ ಹೊಮ್ಮಿಸಿ ಬೇಟೆಯನ್ನು ನಿಷ್ಕ್ರಿಯ ಮಾಡುತ್ತದೆ. ಅಂದಹಾಗೆ, ಕೊಕ್ಕು ಒಂದನ್ನು ಬಿಟ್ಟರೆ ಅದು ಮೃದ್ವಂಗಿ. ಅಂದರೆ, ಉಳಿದೆಲ್ಲ ದೇಹದಲ್ಲಿ ಗಟ್ಟಿ ಅಂಗ ಯಾವುದೂ ಇಲ್ಲ. ಆದರೆ ಮಹಾ ಬುದ್ಧಿವಂತ ಜೀವಿ. ನೀರೊಳಗೆ ಗಾಜಿನ ಭರಣಿಯಲ್ಲಿ ಇವನ್ನು ಕೂಡಿ ಹಾಕಿದ್ದರೆ ಭರಣಿಯ ತಿರುಪಣಿ ಮುಚ್ಚಳವನ್ನೂ ತೆಗೆದು ಈಚೆ ಬರುತ್ತದೆ. ತೆಂಗಿನ ಚಿಪ್ಪನ್ನು ಒಂದೆರಡು ಕೈಗಳಲ್ಲಿ ಹಿಡಿದು ಈಜುತ್ತ, ವೈರಿಯಿಂದ ತಪ್ಪಿಸಿಕೊಳ್ಳಲು ತನ್ನ ಇಡೀ ಶರೀರವನ್ನು ಅದರೊಳಕ್ಕೆ ತೂರಿಸಿ ಅಡಗಿಕೊಳ್ಳುತ್ತದೆ. ಉಪ್ಪುನೀರಿನ ಪೆಟ್ಟಿಗೆಯಲ್ಲಿ ಇಟ್ಟರೆ ಮುಚ್ಚಳ ತೆಗೆದುಕೊಂಡು ಪರಾರಿ ಆಗುತ್ತದೆ. ಅಥವಾ ರಾತ್ರಿ ವೇಳೆ ದೀಪದ ಮೇಲೆ ಶಾಯಿಯನ್ನು ಎರಚಿ, ಕತ್ತಲನ್ನು ನಿರ್ಮಿಸಿಕೊಂಡು ನಿದ್ರಿಸುತ್ತದೆ. ನಿದ್ದೆಯಲ್ಲಿ ಅದರ ಇಡೀ ಶರೀರದ ಮೈಬಣ್ಣ ಬದಲಾಗಿರುತ್ತದೆ. ಆಕ್ಟೊಪಸ್ ಭವಿಷ್ಯವನ್ನೂ ಹೇಳುತ್ತದೆ ಎಂದು ಅನೇಕ ಪ್ರಯೋಗಗಳ ಮೂಲಕ ಸಾಬೀತು ಮಾಡುವ ಯತ್ನಗಳು ನಡೆದಿವೆ.

2010ರಲ್ಲಿ ದಕ್ಷಿಣ ಆಫ್ರಿಕದಲ್ಲಿ ನಡೆದ ವಿಶ್ವ ಫುಟ್‌ಬಾಲ್ ಪಂದ್ಯದಲ್ಲಿ ಪೌಲ್ ಹೆಸರಿನ ಆಕ್ಟೊಪಸ್‌ಗೂ ವಿಶ್ವಖ್ಯಾತಿ ಬಂದಿತ್ತು. ಆಟದ ವಿವಿಧ ಹಂತಗಳಲ್ಲಿ ಯಾವ ದೇಶ ಗೆಲ್ಲುತ್ತದೆ ಎಂದು ಗಾಜಿನ ಪೆಟ್ಟಿಗೆಯಲ್ಲಿ ಪಟ್ಟಾಗಿ ಕೂತಿದ್ದ ಅದಕ್ಕೆ ಕೇಳಲಾಗುತ್ತಿತ್ತು. ಅಚ್ಚರಿ ಹುಟ್ಟಿಸುವಂತೆ 14 ಪಂದ್ಯಗಳಲ್ಲಿ 12 ಪಂದ್ಯಗಳ ಫಲಿತಾಂಶ ಪೌಲ್ ಹೇಳಿದಂತೆಯೇ ನಿಜವಾಗಿತ್ತು. ಫುಟ್‌ಬಾಲ್ ಹಿಡಿದ ಆ ಅಕ್ಟೊಪಸ್‌ನ ಪುತ್ಥಳಿಯನ್ನು ಜರ್ಮನಿಯ ಓವರ್‌ಹಾಸೆನ್ ಎಂಬಲ್ಲಿ ನಿರ್ಮಿಸಲಾಗಿದೆ. ಗಾತ್ರದಲ್ಲಿ ಮೂರು ಸೆಂಟಿಮೀಟರಿನಿಂದ ಹಿಡಿದು ಮೂರು ಮೀಟರ್‌ನಷ್ಟು ಉದ್ದಕ್ಕೂ ಬೆಳೆಯಬಲ್ಲ ಆಕ್ಟೊಪಸ್‌ಗಳು ಮೂರು ವರ್ಷ ಬದುಕುತ್ತವೆ. ಅಂಥ ವಿಶಿಷ್ಟ ಜೀವಿಗಳ ಸಂಖ್ಯೆ ಕಡಿಮೆ ಆಗುತ್ತಿದೆ. ಬಲೆಗೆ ಬಿದ್ದೊ, ಮಾಲಿನ್ಯದಿಂದಾಗಿಯೊ, ಸಮುದ್ರದ ತಾಪಮಾನ ಏರಿಕೆಯಿಂದಾಗಿಯೊ ಅವು ವಿರಳ ಆಗುತ್ತಿವೆ. ಮನುಷ್ಯರನ್ನು ಬಿಟ್ಟರೆ ಡಾಲ್ಫಿನ್‌ಗಳು ಅತ್ಯಂತ ಬುದ್ಧಿವಂತ ಜೀವಿ ಎನ್ನುತ್ತಾರೆ. ಡಾಲ್ಫಿನ್‌ಗಳ ಬುದ್ಧಿವಂತಿಕೆ ವಿಭಿನ್ನವಾದುದು. ಎಂಟು ತೋಳುಗಳಲ್ಲೂ ಮಿದುಳು ಇರುವ ಆಕ್ಟೊಪಸ್‌ನ ಬುದ್ಧಿವಂತಿಕೆ -ಅಷ್ಟಾವಧಾನಿ ಥರಾ!

ಪುಟ 1 ರಿಂದ

# ಅನಂತ ಸ್ಮೃತಿ ನಡಿಗೆ

ಅನಂತ ಸ್ಮೃತಿ ಪಂಜಿನ ಮೆರವಣಿಗೆಯು ಸೌತ್ ಎಂಡ್ ಸರ್ಕಲ್ ವೃತ್ತದ ಅನಂತ ಪ್ರೇರಣಾ ಕೇಂದ್ರದಿಂದ ಆರಂಭವಾಗಿ, ಬಸವನಗುಡಿಯ ನ್ಯಾಷನಲ್ ಹೈಸ್ಕೂಲ್ ಬಳಿಯ ಉತ್ತರಾದಿ ಮಠದ ಆವರಣದಲ್ಲಿ ಕೊನೆಗೊಂಡಿತು. ಉತ್ತರಾದಿ ಮಠದ ಸಭಾಂಗಣದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಅನಂತಕುಮಾರ್ ಪ್ರತಿಷ್ಠಾನದ ಕಾರ್ಯದರ್ಶಿ ಡಾ. ತೇಜಸ್ವಿನಿ ಅನಂತಕುಮಾರ್ ಅವರು, ಅನಂತಕುಮಾರ್ ಅವರ ಸಾಮಾಜಿಕ ಮತ್ತು ದೇಶಸೇವೆ ಹಾಗೂ ಪ್ರತಿಷ್ಠಾನದ ವಿವಿಧ ಕಾರ್ಯಗಳ ಕುರಿತು ವಿವರಗಳನ್ನು ನೀಡಿದರು. ಅದಮ್ಯ ಚೇತನ ಸಂಸ್ಥೆಯ ಅನ್ನದಾನ, ಹೊಗೆರಹಿತ-ತ್ಯಾಜ್ಯರಹಿತ ಅಡುಗೆ ಮನೆ, ಹಸಿರು ಭಾನುವಾರ (ಸಸ್ಯಾಗ್ರಹ), ಪ್ಲೇಟ್ ಬ್ಯಾಂಕ್, ಪೌಷ್ಟಿಕ ಆಹಾರ ಆಂದೋಲನ, ಮತ್ತು ಹಸಿರು ಜೀವನ ಶೈಲಿ ಸೇರಿದಂತೆ ಹಲವು ಯೋಜನೆಗಳನ್ನು ವಿವರಿಸಿದರು.

ಕಾರ್ಯಕ್ರಮದ ಅಂಗವಾಗಿ ಕನ್ನಡ ನಾಡನ್ನು ಆಳಿದ ಮತ್ತು ರಾಷ್ಟ್ರಕ್ಕೆ ಕೊಡುಗೆ ನೀಡಿದ 14 ರಾಜರು ಮತ್ತು ರಾಣಿಯರ ಸಾಧನೆಗಳ ಸಂಸ್ಮರಣೆಯೂ ನಡೆಯಿತು. ಕಾರ್ಯಕ್ರಮದ ಸಂಚಾಲಕರಾಗಿದ್ದ ಪ್ರೊ.ಪೂರ್ಣಪ್ರಜ್ಞ ಅವರು ಈ ಪ್ರಸಿದ್ಧ ರಾಜರು-ರಾಣಿಯರ ಸಂಕ್ಷಿಪ್ತ ಮಾಹಿತಿಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ಶಾಸಕರಾದ ಸರ್ವಶ್ರೀ ಸಿ.ಕೆ. ರಾಮಮೂರ್ತಿ, ಉದಯ ಗರುಡಾಚಾರ್, ರವಿ ಸುಬ್ರಹ್ಮಣ್ಯ ಮತ್ತು ಜ್ಯೋತಿ ಗರುಡಾಚಾರ್, ವಿಷ್ಣುಕಾಂತ್ ಚಟಪಲ್ಲಿ, ಜಿ.ಎಂ. ಇನಾಂದಾರ್, ರಘುನಾಥ ಮಲ್ಕಾಪುರೆ, ಜಗದೀಶ ಹಿರೇಮನಿ, ವೇದವ್ಯಾಸ ಭಟ್, ಎನ್ ರವಿಕುಮಾರ್, ಡಾ. ಮಂಜುನಾಥ್, ಪ್ರತಿಭಾ ಓಕ್, ಇಂದುಮತಿ ರಾವ್, ಮೊದಲಾದ ಗಣ್ಯರು ಪಾಲ್ಗೊಂಡಿದ್ದರು.



ಅನಂತ ಸ್ಮೃತಿ ನಡಿಗೆ - ಪಂಜಿನ ಮೆರವಣಿಗೆ ಕಾರ್ಯಕ್ರಮವು ಅನಂತಕುಮಾರ್ ಅವರ ದೇಶಸೇವಾ ಮನೋಭಾವ, ಮೌಲ್ಯಗಳು ನಾಡಿನ ಸೇವೆಯನ್ನು ಪುನರ್‌ಸ್ಮರಿಸಿ, ಮುಂದಿನ ಪೀಳಿಗೆಗೆ ರಾಷ್ಟ್ರಭಕ್ತಿ ಮತ್ತು ಜನಸೇವೆಯ ಸಂದೇಶವನ್ನು ತಲುಪಿಸುವ ಮಹತ್ವದ ಪ್ರಯತ್ನವಾಗಿ ಮತ್ತೊಮ್ಮೆ ಯಶಸ್ವಿಯಾಯಿತು. ದೇಶ ಮತ್ತು ಸಮಾಜಮುಖಿ ಸೇವೆಗೆ ಅನಂತಕುಮಾರ್ ನೀಡಿದ ಕೊಡುಗೆಗಳು ಮುಂದಿನ ಪೀಳಿಗೆಗೆ ಪ್ರೇರಣೆಯಾಗಲಿ ಎಂಬ ಆಶಯದೊಂದಿಗೆ ಕಾರ್ಯಕ್ರಮವು ಅರ್ಥಪೂರ್ಣವಾಗಿ ಮುಕ್ತಾಯಗೊಂಡಿತು.

# ಲಲಿತಾದಿತ್ಯ ಮುಕ್ತಪೀಡ: ಕಾಶ್ಮೀರದ ಅಪ್ರತಿಮ ಚಕ್ರವರ್ತಿ

**ವ್ಯಕ್ತಿ ವಿಶೇಷ ಮಾಲಿಕೆ**

8ನೇ ಶತಮಾನದ ಭಾರತದ ಇತಿಹಾಸದಲ್ಲಿ ಅತ್ಯಂತ ಬಲಿಷ್ಠ, ದೂರದೃಷ್ಟಿಯ, ಸಾಮ್ರಾಜ್ಯ ನಿರ್ಮಾಣದ ಬಯಕೆ ಹೊಂದಿದ್ದ ರಾಜನಾಗಿ ಹೆಸರು ಪಡೆದವರು ಕರ್ಕೋಟ ವಂಶದ ಶ್ರೇಷ್ಠ ಚಕ್ರವರ್ತಿ ಲಲಿತಾದಿತ್ಯ ಮುಕ್ತಪೀಡ. ಅವರು ಕಾಶ್ಮೀರವನ್ನು ಕೇವಲ ಒಂದು ಪರ್ವತ ಪ್ರದೇಶದ ರಾಜ್ಯವಾಗಿ ಉಳಿಸದೆ, ಮಹಾದ್ವೀಪಗಳವರೆಗೆ ಪ್ರಭಾವ ಬೀರಿದ ಮಹಾಸಾಮ್ರಾಜ್ಯವನ್ನಾಗಿ ರೂಪಿಸಿದರು. ಅವರ ಕಾಲದಲ್ಲಿ ಕಾಶ್ಮೀರ ರಾಜಕೀಯವಾಗಿ ಬಲಿಷ್ಠವಾಗಿದ್ದು, ಸಂಸ್ಕೃತಿಕವಾಗಿ ಚೇತನದ ಹೊಸ ಅಲೆ ಕಂಡಿತು.

ಲಲಿತಾದಿತ್ಯರ ಆಡಳಿತಾವಧಿಯನ್ನು ಸಮೃದ್ಧಿ, ವಿಸ್ತರಣೆ ಮತ್ತು ಪುನರುಜ್ಜೀವನದ ಯುಗವೆಂದು ಕರೆಯಲಾಗುತ್ತದೆ. ಕಲ್ಹಣನ ಪ್ರಸಿದ್ಧ ರಾಜತರಂಗಿಣಿ ಕೃತಿಯಲ್ಲಿ ಅವರ ಜೀವನ, ಆಡಳಿತ ಮತ್ತು ವಿಜಯಗಳು ವೈಭವದಿಂದ ವಿವರಿಸಲ್ಪಟ್ಟಿವೆ. ಅಲ್ಲಿ ಉಲ್ಲೇಖಿಸಿದಂತೆ, ಅವರು ಉತ್ತರ ಭಾರತ, ಗಂಧಾರ, ಟಕ್ಸಿಲಾ, ಬೆಳ್ಳಿಯ ಪ್ರದೇಶಗಳು, ಇಂದಿನ ಅಫ್ಘಾನಿಸ್ತಾನ ಮತ್ತು ಮಧ್ಯ ಏಷ್ಯಾದ ಹಲವು ಪ್ರದೇಶಗಳವರೆಗೂ ಸೈನ್ಯಯಾತ್ರೆಗಳನ್ನು ನಡೆಸಿ ತಮ್ಮ ಸಾಮ್ರಾಜ್ಯ ಪ್ರಭಾವವನ್ನು ಸ್ಥಾಪಿಸಿದ ಮಹಾಯೋಧನಾಗಿದ್ದರು. ಅವರ ಸೈನಿಕ ವಿಸ್ತರಣೆ ಕೇವಲ ಆಕ್ರಮಣಪ್ರವೃತ್ತಿ ಅಲ್ಲ; ರಾಜಕೀಯ ಸ್ಥಿರತೆ, ವ್ಯಾಪಾರಮಾರ್ಗಗಳ ಸುರಕ್ಷತೆ ಮತ್ತು ಸಂಸ್ಕೃತಿಗಳ ಪರಸ್ಪರ ವಿನಿಮಯವನ್ನು ಬಲಪಡಿಸುವ ದೂರದೃಷ್ಟಿಯ ರಾಜ್ಯತಂತ್ರಕ್ಕೆ ಅದು ಸಂಕೇತ.

ಲಲಿತಾದಿತ್ಯರಿಗೆ ಶಾಶ್ವತ ಕೀರ್ತಿಯನ್ನು ತಂದ ಮತ್ತೊಂದು ಮಹತ್ತರ ಸಾಧನೆ ಅವರ ಕಲಾ ಮತ್ತು ವಾಸ್ತುಶಿಲ್ಪದ ಪ್ರೋತ್ಸಾಹ. ಅವರು ನಿರ್ಮಿಸಿದ ಮಾರ್ತಾಂಡ ಸೂರ್ಯ ದೇವಾಲಯವು ಕಾಶ್ಮೀರದ ಅತ್ಯಂತ ಅದ್ಭುತ ವಾಸ್ತುಶಿಲ್ಪದ ಆಕರ್ಷಕ ಸೃಷ್ಟಿಗಳಲ್ಲಿ ಒಂದು. ಈ ದೇವಾಲಯವು ಕೇವಲ ಧಾರ್ಮಿಕ ಕೇಂದ್ರವಲ್ಲ; ಕಾಶ್ಮೀರದ ನವೋದ್ಯಮ ವಾಸ್ತುಶಿಲ್ಪಕ್ಕೆ ಶಿಲಾಮಯ ಕಾವ್ಯವಾಗಿದ್ದು, ಸೂರ್ಯನಿಗೆ ಸಮರ್ಪಿತವಾದ ಅದ್ಭುತ ಶಿಲಾಕೃತಿಗಳ ಸಮೂಹವಾಗಿದೆ.

**ಜಾಗತಿಕ ದೃಷ್ಟಿಯ ಸಾಮ್ರಾಟ!**

ಲಲಿತಾದಿತ್ಯರು ತಮ್ಮ ಕಾಲಕ್ಕೆ ಅಪರೂಪವಾದ ಜಾಗತಿಕ ದೃಷ್ಟಿಯ ನಾಯಕರು. ಸಮರ ಜಯಗಳಿಸುವ ಜೊತೆಗೆ ಅವರು ವಿದೇಶಿ ಸಂಸ್ಕೃತಿ, ಶಾಸ್ತ್ರ, ಕಲಾ ಹಾಗೂ ತಂತ್ರಜ್ಞಾನಗಳಿಂದ ಪ್ರೇರಣೆ ಪಡೆದರು. ಅವರ ಯಾತ್ರೆಗಳ ಪರಿಣಾಮ ಕಾಶ್ಮೀರಕ್ಕೆ ಗ್ರೀಕ್ ಮತ್ತು ಮಧ್ಯ ಏಷ್ಯಾ ಶೈಲಿಯ ಶಿಲ್ಪಕಲೆ, ವ್ಯಾಪಾರ ಬೆಳವಣಿಗೆ ಮತ್ತು ಸಂಸ್ಕೃತಿಗಳ ವಿನಿಮಯ ಜೋರಾಯಿತು. ಇದರಿಂದ ಕಾಶ್ಮೀರವು ಉತ್ತರ ಭಾರತದಷ್ಟೇ ಅಲ್ಲ, ಆ ಕಾಲದ ಏಷ್ಯಾದ ಸಂಸ್ಕೃತಿ ಮತ್ತು ಜ್ಞಾನಕೇಂದ್ರವಾಗಿ ಬೆಳೆದಿತು.



**ಪ್ರಜಾಹಿತ ಮತ್ತು ಸಾಮಾಜಿಕ ನೀತಿ**

ಲಲಿತಾದಿತ್ಯರ ಆಡಳಿತವು ಸಾಮ್ರಾಜ್ಯ ವಿಸ್ತಾರದ ಜೊತೆಗೆ ಪ್ರಜಾಹಿತಕ್ಕೂ ಒತ್ತು ನೀಡಿತ್ತು. ಕೃಷಿ ಮತ್ತು ನೀರಾವರಿ ಸುಧಾರಿಸಿದ ಅವರು ರೈತರ ಮೇಲಿನ ಭಾರ ಕಡಿಮೆ ಮಾಡಿ ಉತ್ಪಾದನೆ ಹೆಚ್ಚಿಸಿದರು. ಬಡವರು ಮತ್ತು ಅನಾಥರಿಗೆ ರಾಜ್ಯದ ನೆರವು ಒದಗಿಸಿ, ವ್ಯಾಪಾರಿಗಳಿಗೆ ಅನುಕೂಲಕರ ವ್ಯವಸ್ಥೆ ಕಲ್ಪಿಸಿದರು. ಇದರ ಪರಿಣಾಮ ಕಾಶ್ಮೀರದಲ್ಲಿ ಆರ್ಥಿಕ ಚಟುವಟಿಕೆಗಳು ಬೆಳೆಯುತ್ತ, ಜನಜೀವನದಲ್ಲಿ ಸಮೃದ್ಧಿ ನೆಲೆಯೂರಿತು.

ಲಲಿತಾದಿತ್ಯರು ಬಲಿಷ್ಠ ಸಾಮ್ರಾಟರಾಗಿದ್ದು, ಕಾಶ್ಮೀರವನ್ನು ರಾಜಕೀಯ, ಆರ್ಥಿಕ ಮತ್ತು ಸಂಸ್ಕೃತಿಕವಾಗಿ ಉನ್ನತಿಗೆ ತೆಗೆದುಕೊಂಡ ವಿಶಿಷ್ಟ ರಾಜ್ಯನಾಯಕರು. ಅವರ ಆಡಳಿತವು ವಿಸ್ತರಣೆ, ಸಮೃದ್ಧಿ ಮತ್ತು ಜನಹಿತದ ಸಮನ್ವಯವಾಗಿದ್ದು, ಇತಿಹಾಸದಲ್ಲಿ ಶ್ರೇಷ್ಠ ಚಕ್ರವರ್ತಿಗಳಲ್ಲಿ ಅವರ ಹೆಸರು ಶಾಶ್ವತವಾಗಿ ಉಳಿದಿದೆ.

# ಉಡುಪಿ ಶ್ರೀ ಕೃಷ್ಣನ ಸನ್ನಿಧಿಯಲ್ಲಿ ಶ್ರೀ ಚೇತನ ಕಾರ್ಯಕರ್ತರಿಂದ ಗೀತಾ ಪಠಣ






ಅದಮ್ಯ ಚೇತನ ಸಂಸ್ಥೆಯ ‘ಶ್ರೀ ಚೇತನ’ದ ಕಾರ್ಯಕರ್ತೆಯರು ಉಡುಪಿ ಶ್ರೀ ಕೃಷ್ಣನ ಸನ್ನಿಧಿಯ ಗೀತಾ ಮಂದಿರದಲ್ಲಿ ನ. ೧೬ರ ಭಾನುವಾರದಂದು ಭಗವದ್ಗೀತೆಯ ೧೮ ಅಧ್ಯಾಯಗಳ ಎಲ್ಲ ಶ್ಲೋಕಗಳ ಪಠಣ ಕಾರ್ಯವನ್ನು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀಮತಿ ಪ್ರತಿಭಾ ಓಕ್, ಇತರರು ಉಪಸ್ಥಿತರಿದ್ದರು.

ಶ್ರೀ ಚೇತನ ಕಾರ್ಯಕರ್ತೆಯರು ಸ್ವಯಂಸೇವಕಿಯರಾಗಿದ್ದು, ಅನ್ನದಾನದ ಸೇವೆಯಲ್ಲಿ ತೊಡಗಿರುವ ಅದಮ್ಯ ಚೇತನದ ಸೇವಾ ಕಾರ್ಯಗಳಲ್ಲಿ ಸಕ್ರಿಯರಾಗಿದ್ದಾರೆ. ಅಧ್ಯಾತ್ಮ ಸಾಧನೆಯ ಕಾಯಕದಲ್ಲಿ ಗೀತಾ ಪಠಣ ಕಾರ್ಯವನ್ನು ಇವರು ಕೈಗೊಂಡಿದ್ದಾರೆ. ೨೦೨೩ರ ಜನವರಿ ತಿಂಗಳಿನಿಂದ ಪ್ರತಿ ಗುರುವಾರದಂದು ಗೀತಾ ಪಠಣ ಕಾರ್ಯವನ್ನು ಶ್ರೀ ಚೇತನದ ಸ್ವಯಂ ಸೇವಕಿಯರು ನಡೆಸುತ್ತಿದ್ದಾರೆ. ಇದರಂತೆ ಗೀತೆಯ ೨೦೧ನೆಯ ಪಠಣವನ್ನು ಉಡುಪಿ ಶ್ರೀಕೃಷ್ಣ ದೇಗುಲದ ಗೀತಾ ಮಂದಿರದಲ್ಲಿ ಸಮರ್ಪಿಸಿದರು.

ಬಳಿಕ ಪರ್ಯಾಯ ಶ್ರೀ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಗೀತಾ ಪಠಣದಲ್ಲಿ ಭಾಗವಹಿಸಿದ ಎಲ್ಲರಿಗೂ ಅನುಗ್ರಹ ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ಕೋಟಿಗೀತಾ ಜ್ಞಾನ ಯಜ್ಞದ ಭಾಗಿಯಾದ ಪ್ರಯುಕ್ತ ಕೃತಿಗಳನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಪ್ರತಿಭಾ ಓಕ್ ಅವರು ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರಿಗೆ ಅರ್ಪಿಸಿದರು. ಶ್ರೀ ಚೇತನದ ಕಾರ್ಯಕರ್ತೆಯರು ಅದಮ್ಯ ಚೇತನದಲ್ಲಿ ಗೀತಾ ಪಠಣ ಕಾರ್ಯ ಕೈಗೊಂಡ ಒಂದು ಸಂದರ್ಭದಲ್ಲಿ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಸಂಸ್ಥೆಗೆ ಆಗಮಿಸಿದ್ದರು ಎಂಬುದನ್ನು ಕಾರ್ಯಕರ್ತೆಯರು ನೆನಪಿಸಿಕೊಂಡರು.

# ಶ್ರದ್ಧಾಂಜಲಿ





ಸಾವಿರಾರು ಮರಗಳನ್ನು ನೆಟ್ಟು ಪೋಷಿಸುವ ಮೂಲಕ ಪರಿಸರ ಸಂರಕ್ಷಣೆಗೆ ಅತ್ಯಪೂರ್ವ ಸೇವೆ ಸಲ್ಲಿಸಿದ ವೃಕ್ಷಮಾತೆ, ಪದ್ಮಶ್ರೀ ಪುರಸ್ಕೃತರಾದ ಡಾ. ಸಾಲುಮರದ ತಿಮ್ಮಕ್ಕ ಅವರ ಅಗಲಿಕೆ ದೇಶದ ಪರಿಸರ ಚಳವಳಿಗೆ ದೊಡ್ಡ ನಷ್ಟ. ತಿಮ್ಮಕ್ಕ ಅವರ ಜೀವನವೇ ಹಸಿರು ಸಂಸ್ಕೃತಿ, ಪರಿಸರ ಪ್ರೇಮ ಹಾಗೂ ಸಾಮಾನ್ಯ ನಾಗರಿಕರೂ ಸಹ ಮಹತ್ತರವಾದ ಬದಲಾವಣೆಗೆ ಕಾರಣರಾಗಬಹುದು ಎಂಬುದಕ್ಕೆ ಜೀವಂತ ಸಾಕ್ಷಿಯಾಗಿದೆ.

ಬಡ ಕುಟುಂಬದಲ್ಲಿ ಜನಿಸಿ, ಜೀವನದ ಕಠಿಣ ಸವಾಲುಗಳನ್ನು ಎದುರಿಸಿದ ತಿಮ್ಮಕ್ಕ ಅವರು ಮಕ್ಕಳಿಲ್ಲದ ದುಃಖವನ್ನು ಸಮಾಜದ ಹಿತಕ್ಕಾಗಿ ಪರಿವರ್ತಿಸಿದವರು. ಪತಿಯಾದ ಶ್ರೀ ಚಿಕ್ಕಯ್ಯ ಅವರೊಡನೆ ಸೇರಿ, ಬರಗಾಲ ಮತ್ತು ಪ್ರಕೃತಿಯ ಸವಾಲುಗಳ ನಡುವೆಯೂ 200ಕ್ಕೂ ಹೆಚ್ಚು ಆಲದ ಮರಗಳನ್ನು ನೆಟ್ಟು, ಅವುಗಳನ್ನು ತಾಯಿಯಂತೆ ಪಾಲಿಸಿ ಬೆಳೆಸಿದರು. ಆಧುನಿಕ ಯುಗದ ಪರಿಸರ ಸಂರಕ್ಷಣಾ ಚಳವಳಿ ಪ್ರಾರಂಭವಾಗುವ ಮೊದಲೇ, ಯಾವುದೇ ಸರ್ಕಾರಿ ಯೋಜನೆಗಳಿಲ್ಲದೆ, ಪ್ರಚಾರದ ಆಶೆಯಿಲ್ಲದೆ, ಪ್ರಶಸ್ತಿಯ ನಿರೀಕ್ಷೆಯಿಲ್ಲದೆ ಮಾಡಿದ ಅವರ ಕಾರ್ಯವು ಅವರ ಮಹತ್ವವನ್ನು ಸಾರುತ್ತದೆ. ಅವರ ಸೇವೆಯನ್ನು ಗುರುತಿಸಿ ಭಾರತ ಸರ್ಕಾರವು ಪದ್ಮಶ್ರೀ ನೀಡಿ ಗೌರವಿಸಿತು. ಆದರೆ, ತಿಮ್ಮಕ್ಕಮ್ಮನವರಿಗೆ ಪ್ರಶಸ್ತಿ ಎಂದರೆ ಮರಗಳ ನೆರಳು, ಹೂವುಗಳ ಸುಗಂಧ, ಹಸಿರು ರಸ್ತೆಯಲ್ಲಿ ಸಾಗುವ ಜನರ ಸಂತೋಷವೇ ಆಗಿತ್ತು. ಇದನ್ನೇ ಅವರು ತಮ್ಮ ಜೀವನದ ಬಹುಮಾನವೆಂದು ಭಾವಿಸಿದ್ದರು.

2022 ರಲ್ಲಿ ನಡೆದ ನಮ್ಮ ಅನಂತ ಸೇವಾ ಉತ್ಸವದ ‘ಸಸ್ಯಾಗ್ರಹ’ ಕಾರ್ಯಕ್ರಮದಲ್ಲಿ ತಿಮ್ಮಕ್ಕನವರು ಭಾಗವಹಿಸಿ ನಮ್ಮ ಕಾರ್ಯಕ್ರಮಕ್ಕೆ ಪ್ರೇರಣೆ, ಆಶೀರ್ವಾದ ಮತ್ತು ಉತ್ಸಾಹ ತುಂಬಿದ್ದರು. ಪರಿಸರ ಸಂರಕ್ಷಣೆಯ ವಿಷಯದಲ್ಲಿ ಅವರ ಮಾತು, ಅವರ ಸರಳತೆ, ವಿನಯ ಮತ್ತು ಸೇವಾಭಾವ ಎಲ್ಲರ ಮನಸ್ಸನ್ನು ಮುಟ್ಟಿದವು. ಅವರು ಕೇವಲ ವೃಕ್ಷಗಳನ್ನು ಬೆಳೆಸಿದವರಲ್ಲ, ಬದಲಾಗಿ ಸಮಾಜದಲ್ಲಿ ‘ಪರಿಸರ ಸಂವೇದನೆ’ ಎಂಬ ಬೀಜವನ್ನು ಬಿತ್ತಿದವರು.

ಅದಮ್ಯ ಚೇತನ ಮತ್ತು ಅನಂತಕುಮಾರ್ ಪ್ರತಿಷ್ಠಾನದ ಪರವಾಗಿ ವೃಕ್ಷಮಾತೆ ಡಾ. ಸಾಲುಮರದ ತಿಮ್ಮಕ್ಕ ಅವರಿಗೆ ಗೌರವಪೂರ್ವಕ ಶ್ರದ್ಧಾಂಜಲಿಗಳನ್ನು ಸಲ್ಲಿಸುತ್ತೇವೆ.

## ಹುಬ್ಬಳ್ಳಿ ಅನಂತ ಪ್ರೇರಣಾ ಕೇಂದ್ರದಲ್ಲಿ 'ಗ್ರಾಮ ಚೇತನ' ನೇತೃತ್ವ ವಿಕಸನ



ಅನಂತಕುಮಾರ್ ಪ್ರತಿಷ್ಠಾನ ಮತ್ತು ಅದಮ್ಯ ಚೇತನ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ, ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ ಗ್ರಾಮೀಣ ಮಹಿಳೆಯರಿಗಾಗಿ ಆಯೋಜಿಸಿದ್ದ 'ಗ್ರಾಮ ಚೇತನ' ನೇತೃತ್ವ ವಿಕಸನ ಶಿಬಿರವು ನವೆಂಬರ್ 8 ರಂದು ಯಶಸ್ವಿಯಾಗಿ ಜರುಗಿತು.

ಹುಬ್ಬಳ್ಳಿ ತಾಲೂಕು ಮತ್ತು ಪಕ್ಕೀರನಂದಿಹಳ್ಳಿ, ಮೂಕಬಸರಿಕಟ್ಟಿ, ಹೋತನಳ್ಳಿ, ಹನುಮನಹಳ್ಳಿ, ಮಾದಾಪೂರ, ಬಗಡಗೇರಿ, ಗೋಕುಲ, ದುಂಡಸಿ, ಹುರುಳಿಕುಟ್ಟಿ ವಿವಿಧ ಗ್ರಾಮಗಳಿಂದ ಬಂದ ಒಟ್ಟು 29 ಮಹಿಳೆಯರು ಈ ಶಿಬಿರದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಶಿಬಿರದ ಮೊದಲ ಅವಧಿಯಲ್ಲಿ ಶ್ರೀಮತಿ ವೇದಾ ಪುರೋಹಿತ್ ಅವರು ಗ್ರಾಮೀಣ ಮಹಿಳೆಯರ ಸಾಮಾಜಿಕ ಪಾಲ್ಗೊಳ್ಳುವಿಕೆ, ಸ್ವ ಉದ್ಯೋಗ ಅವಕಾಶಗಳು, ಪರಿಸರ ಸಂರಕ್ಷಣೆ, ಸಾಮರಸ್ಯ ನಿರ್ಮಾಣ ಮುಂತಾದ ವಿಷಯಗಳ ಕುರಿತು ವಿವರವಾದ ಮಾಹಿತಿ ಮತ್ತು ಮಾರ್ಗದರ್ಶನ ನೀಡಿದರು.

ಎರಡನೇ ಅವಧಿಯಲ್ಲಿ ಶ್ರೀ ಜಗದೀಶ್ ಬಾಪಟ್ ಅವರು ಎರೆಹುಳ ಗೊಬ್ಬರ ತಯಾರಿಕೆಯ ವಿಧಾನ, ಮಾರುಕಟ್ಟೆ ಕೌಶಲ್ಯಗಳು ಹಾಗೂ ಕೃಷಿ ಉತ್ಪನ್ನಗಳ ಮೌಲ್ಯವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ಶಿಬಿರಾರ್ಥಿಗಳಿಗೆ ತಿಳಿಸಿದರು. ಶಿಬಿರದಲ್ಲಿ ಪಾಲ್ಗೊಂಡ ಮಹಿಳೆಯರು ತಮ್ಮ ಗ್ರಾಮಗಳಲ್ಲಿ ಈ ಅರಿವು ಮತ್ತು ಕೌಶಲ್ಯಗಳನ್ನು ಅನುಸರಿಸುವುದಾಗಿ ತಿಳಿಸಿ, ಆಯೋಜಕರಿಗೆ ಕೃತಜ್ಞತೆ ಸಲ್ಲಿಸಿದರು.



**ಹುಬ್ಬಳ್ಳಿ:** ಅನಂತ ಪ್ರೇರಣಾ ಕೇಂದ್ರ, ಹುಬ್ಬಳ್ಳಿಯಲ್ಲಿ ದಿನಾಂಕ 12-11-2025 ರಂದು ಅನಂತಕುಮಾರರ ಪುಣ್ಯಸ್ಮರಣೆಯ ಅಂಗವಾಗಿ "ಅನಂತ ಸ್ಮೃತಿ" ಎಂಬ ವಿಶೇಷ ಕಾರ್ಯಕ್ರಮ ಜರುಗಿತು.ಕಾರ್ಯಕ್ರಮವನ್ನು ಪೀಠಾಧಿಪತಿ ಪೂಜ್ಯ ಶ್ರೀ ಸಚ್ಚಿದಾನಂದ ಸ್ವಾಮೀಜಿ, ಶಾಂತಾಶ್ರಮ, ಹುಬ್ಬಳ್ಳಿ ಇವರು ದೀಪ ಪ್ರಜ್ವಲನೆ ಮೂಲಕ ಉದ್ಘಾಟಿಸಿದರು.

ನಂತರ, ಶ್ರೀ ಲಕ್ಷ್ಮಣರಾವ್ ಓಕ್ ಅವರು ಅನಂತಕುಮಾರರ ಜೀವನ ಸಾಧನೆ, ಸಾರ್ವಜನಿಕ ಜೀವನದಲ್ಲಿ ಅವರ ಕೊಡುಗೆ ಮತ್ತು ಮೌಲ್ಯಾಧಾರಿತ ರಾಜಕೀಯದ ಕುರಿತು ಮಾತನಾಡಿದರು.ಪೂಜ್ಯ ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ಭಗವದ್ಗೀತೆ ಚಿಂತನ ಮಂಥನ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲಾ ಮಹಿಳೆಯರೂ ಆಸಕ್ತಿಯಿಂದ ಭಗವದ್ಗೀತೆ ಚಿಂತನ ಮಂಥನದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿಸಿದರು.

# ತಿಂಗಳ ವರದಿ
**( ಸೆಪ್ಟೆಂಬರ್ - ಅಕ್ಟೋಬರ್ )**

### ಶ್ರದ್ಧೆಯ ಶಿಲ್ಪ

ಪ್ರತಿ ಮಂಗಳವಾರ ಮುಂಜಾನೆ 6:35ಕ್ಕೆ ಮತ್ತು ಸಂಜೆ 6:10ಕ್ಕೆ ಮೈಸೂರು ಅಕಾಶವಾಣಿಯಿಂದ ಬಿತ್ತರಗೊಳ್ಳುತ್ತಿರುವ ಶ್ರದ್ಧೆಯಶಿಲ್ಪ ಬಾನುಲಿ ಕಾರ್ಯಕ್ರಮವನ್ನು ಅದಮ್ಯ ಚೇತನ ಸಂಸ್ಥೆಯು ಪ್ರಾಯೋಜಿಸುತ್ತಿದೆ. ಶ್ರೀ ಟಿ. ಎಸ್ ಗೋಪಾಲ್ ಪ್ರಸ್ತುತ ಪಡಿಸುತ್ತಿರುವ ಈ ಕಾರ್ಯಕ್ರಮವು ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮವಾಗಿದೆ. ಪುರಾತನ ದೇವಾಲಯಗಳನ್ನು ಪರಿಚಯಿಸುವ ಈ ಸರಣಿಯಲ್ಲಿ ಈ ತಿಂಗಳು ಕಂಬದೂರಿನ ಮಲ್ಲೇಶ್ವರ ದೇವಾಲಯ, ಹಾವೇರಿಯ ಸಿದ್ದೇಶ್ವರ ದೇವಾಲಯ, ಕೋಲಾರ ಜಿಲ್ಲೆಯ ಮಡಿವಾಳದ ಗಂಗಾಧರೇಶ್ವರ ದೇವಾಲಯ, ತುಮಕೂರು ಜಿಲ್ಲೆಯ ಮಧುಗಿರಿಯ ದೇವಾಲಯವನ್ನು ಪರಿಚಯಿಸಲಾಯಿತು.

## ಬಾಗಲಕೋಟೆ ಜಿಲ್ಲೆಯ ಮುಧೋಳ ನಗರದಲ್ಲಿ ಅನಂತ ಪ್ಲೇಟ್ ಬ್ಯಾಂಕ್ ಉದ್ಘಾಟನೆ



ಅದಮ್ಯ ಚೇತನ ಸಂಸ್ಥೆಯ ಪರಿಸರ ಸ್ನೇಹಿ ಉಪಕ್ರಮವಾದ ಅನಂತ ಪ್ಲೇಟ್ ಬ್ಯಾಂಕ್ ಅಕ್ಟೋಬರ್ 27ರಂದು ಬಾಗಲಕೋಟೆ ಜಿಲ್ಲೆಯ ಮುಧೋಳ ನಗರದಲ್ಲಿ ಅದಮ್ಯ ಚೇತನದ ಟ್ರಸ್ಟಿಗಳಾದ ಶ್ರೀ ಪ್ರದೀಪ್ ಓಕ್ ಅವರು ಉದ್ಘಾಟಿಸಿದರು. ಡಾ. ವೀರಪ್ಪ ಹನಮಂತ ಮೂಲಿಮನಿ ಅವರ ನೂತನ ಗೃಹಪ್ರವೇಶದ ಶುಭ ಸಂದರ್ಭದಲ್ಲಿ ಈ ಜನಪರ ಯೋಜನೆ ಲೋಕಾರ್ಪಣೆಗೊಂಡಿತು.

ಈ ಕಾರ್ಯಕ್ರಮಕ್ಕೆ ಆಗಮಿಸಿದ ಸಂಬಂಧಿಕರು ಹಾಗೂ ಗಣ್ಯರು "ಪ್ಲೇಟ್ ಬ್ಯಾಂಕ್"ನ ಆಶಯವನ್ನು ಅರಿತು, ಪರಿಸರ ಸ್ನೇಹಿ ಈ ಉಪಕ್ರಮ ಯೋಜನೆಯ ಬಗ್ಗೆ ಸಂತೋಷ ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

**ಹಸಿರು ಭಾನುವಾರ:** ಅದಮ್ಯ ಚೇತನದ ಹಸಿರು ಭಾನುವಾರದ ಯೋಜನೆಯಡಿ, 509 ರಿಂದ 512ನೇ ಭಾನುವಾರಗಳವರೆಗೆ ವಿವಿಧ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದವು. 513, 514, 515, ಮತ್ತು 516 ಹಸಿರು ಭಾನುವಾರಗಳನ್ನು ಕ್ರಮವಾಗಿ, ಕನಕಪುರ ರಸ್ತೆಯ ಉತ್ತರಿ ಶಂಕರ ಮಠದ ಆವರಣ, ವಾಜರಹಳ್ಳಿಯ BCCHS ಲೇಔಟ್‌ನ ಆವರಣ, , ಲಕ್ಷ್ಮೀಪುರ ಮುಖ್ಯ ರಸ್ತೆ, ಹನುಮಂತನಗರ, ಲಕ್ಷ್ಮೀಪುರ ಮುಖ್ಯ ರಸ್ತೆಯ ಜಿಂಕೆ ಪಾರ್ಕ್ ಆವರಣ, ಗವಿಪುರದ ದೋಂಡುಸಾ ಕಲ್ಯಾಣ ಮಂಟಪದ ಆವರಣದಲ್ಲಿ ನಡೆಯಿತು. ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಯುತ್ ಫಾರ್ ಸೇವಾ ಸಂಸ್ಥೆಯ ಕಾರ್ಯಕರ್ತರು, ಹಸಿರು ಯೋಧರು ಮೊದಲಾದವರು ಭಾಗವಹಿಸಿದ್ದರು.

Published by: Tejaswini Ananthkumar
Inputs : Nagesh Hegade | T S Gopal | Poornaprajna| Trivikram Joshi
ACknowldegements:
For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

# ಚಿಣ್ಣರ ಚೇತನ

## ಬೂಟಿನ ದುರ್ಗಂಧ ನಿವಾರಣೆಗೆ ಯೂವಿ ಪೆಟ್ಟಿಗೆ




ನೊಬೆಲ್ ಪ್ರಶಸ್ತಿಗಳ ಬಗ್ಗೆ ನಮಗೆ ಗೊತ್ತು. ವಿಜ್ಞಾನದ ಸರ್ವೋನ್ನತ ಸಾಧನೆಗಳಿಗೆ ಜಾಗತಿಕ ಮಟ್ಟದಲ್ಲಿ ನೀಡುವ ಪ್ರತಿಷ್ಠೆಯ ಪುರಸ್ಕಾರ ಅದು. ಅದಕ್ಕೆ ವ್ಯತಿರಿಕ್ತವಾಗಿ 'ಇಗ್-ನೊಬೆಲ್' ಪ್ರಶಸ್ತಿಗಳೂ ಇವೆ. ಮೇಲ್ನೋಟಕ್ಕೆ ತೀರ ಕ್ಷುಲ್ಲಕ ಎನಿಸುವ, ನಗೆಬುಗ್ಗೆಯನ್ನು ಎಬ್ಬಿಸಬಲ್ಲ (ಆದರೂ ನಮ್ಮನ್ನು ಯೋಚನೆಗೆ ಹಚ್ಚುವ) ಸಂಶೋಧನೆಗಳಿಗೆ ನೀಡುವ ಪ್ರಶಸ್ತಿ ಇದು. ಇದನ್ನೂ ಜಾಗತಿಕ ಮಟ್ಟದಲ್ಲೇ ನೀಡಲಾಗುತ್ತದೆ. ಉದಾಹರಣೆಗೆ 2003ರಲ್ಲಿ ಬೆಂಗಳೂರಿನ ನಿಮ್ಹಾನ್ಸ್‌ನ ಇಬ್ಬರು ವಿಜ್ಞಾನಿಗಳು ಒಂದು ಸಂಶೋಧನೆಗೆ ಇಗ್ನೊಬೆಲ್ ಪ್ರಶಸ್ತಿ ಸಿಕ್ಕಿತ್ತು. ಯಾಕೆ ಗೊತ್ತೆ?

ಕೆಲವರು ಪದೇ ಪದೇ ಮೂಗಿನೊಳಕ್ಕೆ ಬೆರಳು ಹಾಕಿ ಕಿಟ್ಟವನ್ನು ತೆಗೆಯಲು ಯತ್ನಿಸುತ್ತಿರುತ್ತಾರೆ. ಅದು ಮಾನಸಿಕ ತುಮುಲದ ಸಂಕೇತ ಎಂದು ಅವರು ಸಂಶೋಧನ ಪ್ರಬಂಧ ಬರೆದಿದ್ದರು. ಈ ವರ್ಷ ಇನ್ನೊಂದು ಇಗ್-ನೊಬೆಲ್ ಪ್ರಶಸ್ತಿ ಭಾರತಕ್ಕೆ, ಲಖ್ನೋದ ಇಬ್ಬರು ಎಂಜಿನಿಯರ್‌ಗಳಿಗೆ ಇದೀಗ ಲಭಿಸಿದೆ. ಇವರದೂ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವ ಸಾಧನೆಯೇ! ದುರ್ನಾತ ಬೀರುವ ಬೂಟುಗಳ ವಾಸನೆಯನ್ನು ನಿವಾರಿಸಬಲ್ಲ ಪೆಟ್ಟಿಗೆಯನ್ನು ಇವರು ರೂಪಿಸಿದ್ದಾರೆ. ಕೆಲವು ಋತುಗಳಲ್ಲಿ, ಕೆಲವರ ಬೂಟು ಮತ್ತು ಕಾಲುಚೀಲಗಳಲ್ಲಿ ಏಕಾಣುಜೀವಿಗಳು ಬೆಳೆದು ಅದರಿಂದಾಗಿಯೇ ದುರ್ನಾತ ಸೂಸುತ್ತದೆ. ಅಂಥ ಪಾದರಕ್ಷೆಗಳನ್ನು ಅತಿನೇರಳೆ (ಯುವಿ) ಕಿರಣಗಳಿಗೆ ಒಡ್ಡಿದರೆ ಏಕಾಣುಜೀವಿಗಳನ್ನು ಕೊಲ್ಲಬಹುದು. ಅಂಥ ಕಿರಣಗಳನ್ನು ರಾತ್ರಿಯಿಡೀ ಸೂಸಬಲ್ಲ ಪೆಟ್ಟಿಗೆಯನ್ನು ಲಖ್ನೋದ ಶಿವ್ ನಾಡಾರ್ ವಿಶ್ವವಿದ್ಯಾಲಯದ ಹಾಸ್ಟೆಲ್‌ಗಳಲ್ಲಿ ವಾಸಿಸುವ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆಂದು ವಿಕಾಸ್ ಕುಮಾರ್ ಮತ್ತು ಸಾರ್ಥಕ್ ಮಿತ್ತಲ್ ಎಂಬಿಬ್ಬರು ಸಿದ್ಧಪಡಿಸಿದ್ದಾರೆ. ಇಗ್-ನೊಬೆಲ್ ಪಡೆದು ಜಾಗತಿಕ ಮಟ್ಟದಲ್ಲಿ ಛಾಪು ಮೂಡಿಸಿದ್ದಾರೆ.

## ಬಾಲವಿಲ್ಲದ ಧೂಮಕೇತು 'ಥ್ರೀಐ/ಅಟ್ಲಾಸ್'



ಧೂಮಕೇತು ಎಂದರೆ ಸಾಮಾನ್ಯವಾಗಿ ಸೌರಮಂಡಲದ ಅಂಚಿನಿಂದ ಸರ್ರೆಂದು ಸಾಗಿ ಬಂದು ಸೂರ್ಯನಿಗೆ ಪ್ರದಕ್ಷಿಣೆ ಹಾಕಿ ಹೊರಟಲ್ಲಿಗೇ ಮರಳಿ ಹೋಗುವ ಖಗೋಲ ವಿಚಿತ್ರ ಬಂಡೆ. ಕ್ರೀಡಾಂಗಣದಲ್ಲಿ ಕ್ರಿಕೆಟ್ ಆಟ ನೋಡುತ್ತಿದ್ದ ಪ್ರೇಕ್ಷಕನೊಬ್ಬ ಇದ್ದಕ್ಕಿದ್ದ ಹಾಗೆ ಪಿಚ್ ಕಡೆ ಓಡಿ ಬಂದು ಬೈಸಿಕೊಂಡು ಸ್ವಸ್ಥಾನಕ್ಕೆ ಹೋದ ಹಾಗೆ! ಧೂಮಕೇತು ಸೂರ್ಯನ ಸಮೀಪ ಬರುತ್ತಿದ್ದ ಹಾಗೆ ಅದರ ತಲೆ ಬಿಸಿಯಾಗಿ, ಆವಿಯಾಗಿ ನಾನಾ ಬಗೆಯ ಅನಿಲಗಳು ಹೊಮ್ಮುತ್ತ ಅದು ಗಾಳಿಪಟದ ಬಾಲಂಗೋಚಿಯ ಹಾಗೆ, ಅಥವಾ ಪೊರಕೆಯ ಹಾಗೆ ಕಾಣುತ್ತದೆ. ಆದರೆ ಈ ಬಾರಿ ಬಂದ ಥ್ರೀಐ/ಅಟ್ಲಾಸ್' ಹೆಸರಿನ ಧೂಮಕೇತು ವಿಜ್ಞಾನಿಗಳ ತಲೆಯನ್ನೇ ಬಿಸಿ ಮಾಡುತ್ತಿದೆ. ಏಕೆಂದರೆ ಅದು ಸೌರ ಮಂಡಲದ ಅಂಚಿನಿಂದ ಅಲ್ಲ, ಬೇರೆ ಯಾವುದೋ ನಕ್ಷತ್ರ ಲೋಕದಿಂದ ಸಿಡಿದು ಬಂದಿದೆ. ಕ್ರೀಡಾಂಗಣದ ಒಳಗಿನಿಂದಲ್ಲ, ಬೇರೆ ಯಾವುದೋ ಊರಿನಿಂದ ಕ್ರಿಕೆಟ್ ಮೈದಾನಕ್ಕೆ ನುಗ್ಗಿ ಬಂದು ಆಟಗಾರರ ಮಧ್ಯೆದಿಂದ ಓಡಿದ ಹಾಗೆ.

ಹಿಂದೆ ಎರಡು ಬಾರಿ ಹೀಗೆ ನಕ್ಷತ್ರಲೋಕದ ತುಣುಕುಗಳು ಧೂಮಕೇತು ಥರಾ ಸಾಗಿ ಹೋಗಿದ್ದವು. ಇದು ಮೂರನೆಯದು. ವಿಶೇಷ ಏನೆಂದರೆ ಅದರ ತಲೆಯಿಂದ ಹೊಮ್ಮುವ ಆವಿ ಹಿಂದಕ್ಕೆ ಹೋಗುವ ಬದಲು ಮುಂದಕ್ಕೆ ಸೂಸುತ್ತಿದೆ. ತಲೆಗೆ ಹೆಡ್‌ಲೈಟ್ ಕಟ್ಟಿಕೊಂಡವನ ಹಾಗೆ. ಇದು ಬೇರೆ ಯಾವುದೋ ಲೋಕದ ಬುದ್ಧಿಜೀವಿಗಳ ಕಳಿಸಿದ ಯಂತ್ರವೇ ಇರಬೇಕೆಂದು ಅನೇಕರು ಕಲ್ಪಿಸಿದ್ದಾರೆ. ಐದೂವರೆ ಕಿಲೊಮೀಟರ್ ದಪ್ಪದ ಈ ಬಂಡೆ ಭೂಮಿಗೇ ಬಂದು ಬಡಿದೀತೆಂಬ ಭಯ ಬೇರೆ ಹಬ್ಬಿತ್ತು. ಅದನ್ನು ಸ್ಪಷ್ಟ ನೋಡಲೆಂದು ನೆಲದ ಮೇಲಿನ ಟೆಲಿಸ್ಕೋಪ್‌ಗಳು ಸಾಲದೆಂದು ಬಾಹ್ಯಾಕಾಶದಲ್ಲಿನ ಒಂದಲ್ಲ, ಎರಡಲ್ಲ, ಮಾನವ ನಿರ್ಮಿತ ಆರು ಸಾಧನಗಳು ಅತ್ತ ಮುಖ ಮಾಡಿದ್ದವು. ಸದ್ಯ, ನಮಗೆ ಯಾವ ಅಪಾಯವನ್ನೂ ಒಡ್ಡದೆ '3ಐಯ್/ಅಟ್ಲಾಸ್' ದೂರ ಸಾಗಿ ಹೋಗುತ್ತಿದೆ. ಅದು ಏನಿದ್ದೀತು, ಎಲ್ಲೋ ಸಿಡಿದ ನಕ್ಷತ್ರದ ಒಂದು ತುಣುಕೆ? ಅನ್ಯಲೋಕದ ಯಂತ್ರವೆ? ಸದ್ಯಕ್ಕಂತೂ ಸ್ಪಷ್ಟ ಕಾರಣ ಸಿಕ್ಕಿಲ್ಲ. ಬಾಹ್ಯಾಕಾಶದ ಟೆಲಿಸ್ಕೋಪ್‌ಗಳು ಕಳಿಸಿದ ಮಾಹಿತಿಗಳನ್ನು ಅರ್ಥ ಮಾಡಿಕೊಳ್ಳಲು ಇನ್ನೂ ಒಂದೆರಡು ತಿಂಗಳೇ ಬೇಕೆಂದು ಖಗೋಲ ವಿಜ್ಞಾನಿಗಳು ಹೇಳುತ್ತಿದ್ದಾರೆ.

## ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಉಡುಪಿಯ ರಾಜಾಂಗಣದಲ್ಲಿ, ಶ್ರೀ ಸುಗುಣೇಂದ್ರತೀರ್ಥ ಶ್ರೀಗಳು ನವೆಂಬರ್ 16 ರಂದು ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ 'ಶ್ರೀ ಕೃಷ್ಣ ಗೀತಾನುಗ್ರಹ' ಪ್ರಶಸ್ತಿಯನ್ನು ಪ್ರದಾನ ಮಾಡಿದರು.



ವೀರವನಿತೆ ಒನಕೆ ಓಬವ್ವ ಕನ್ನಡ ಸೇನಾ ಸಮಿತಿ ನವೆಂಬರ್ 14 ರಂದು ಆಯೋಜಿಸಿದ್ದ 25ನೇ ವರ್ಷದ ಕನ್ನಡ ರಾಜ್ಯೋತ್ಸವ ಹಾಗೂ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಪುತ್ಥಳಿ ಅನಾವರಣ ಕಾರ್ಯಕ್ರಮಕ್ಕೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.



ಬೆಂಗಳೂರಿನ ಜಯನಗರದಲ್ಲಿ ನವೆಂಬರ್ 1 ರಂದು ನಡೆದ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.



ಬೆಂಗಳೂರಿನ ರಾಷ್ಟ್ರೋತ್ಥಾನ ಶಾಲೆಯ ವಿದ್ಯಾರ್ಥಿಗಳು ಇಬ್ಬರು ಶಿಕ್ಷಕರೊಡನೆ 2025ರ ನ. 19 ರಂದು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದರು



ಶ್ರೀ ಅಣ್ಣಮ್ಮಾ ದೇವಿ ಶಾಲೆಯ ವಿದ್ಯಾರ್ಥಿಗಳು 2025 ರ ನವೆಂಬರ್ 12 ರಂದು ಅದಮ್ಯ ಚೇತನದ ಅಡುಗೆ ಮನೆಗೆ ಭೇಟಿ ನೀಡಿದರು.



ಸಪ್ತಮುಖಿ ಶಿಕ್ಷಣ ಪ್ರಕಲ್ಪ, ಕಾರವಾರದ ವತಿಯಿಂದ ಶ್ರೀಮತಿ ವೀಣಾ ಸಂತೋಷ ಯಲ್ಲಾಪುರ ಅವರ ನೇತೃತ್ವದಲ್ಲಿ 70ಕ್ಕೂ ಹೆಚ್ಚು ಸದಸ್ಯರು ದಿನಾಂಕ 2025ರ ನ.16 ರಂದು ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದರು.



ಕನ್ನಡ ರಾಜ್ಯೋತ್ಸವವನ್ನು ಕೇವಲ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸೀಮಿತಗೊಳಿಸದೆ, ಪರಿಸರ ಸಂರಕ್ಷಣೆಯ ಮಹತ್ಕಾರ್ಯದ ಮೂಲಕ, ನವೆಂಬರ್ 02, 2025 ರಂದು ವಾಜರಹಳ್ಳಿಯ BCCHS ಲೇಔಟ್‌ನಲ್ಲಿ ಅದಮ್ಯ ಚೇತನದ 514ನೇ 'ಹಸಿರು ಭಾನುವಾರ' ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.




ರಾಜಸ್ಥಾನ ಜೋಧಪುರ್ ಉಮೇದ್ ಆಸ್ಪತ್ರೆಯ ಆವರಣದಲ್ಲಿ ಅದಮ್ಯ ಚೇತನದಿಂದ ಅನ್ನದಾನ ಸೇವೆ ನಿರಂತರವಾಗಿ ನಡೆಯುತ್ತಿದೆ.